# 1. ಭರವಸೆಯ ಕಿರಣ

ಇಂದಿನ ಮಕ್ಕಳು ನಾಳಿನ ಪ್ರಜೆಗಳು ಸುಸಂಸ್ಕೃತ ಪ್ರಜೆಗಳಾಗಲು ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಬೇಕು. ನಮ್ಮ ದೇಶ–ನಮ್ಮ ಮಾತೃಭೂಮಿಯ ಮೇಲೆ ಪ್ರೀತಿ, ಅಭಿಮಾನ, ಭಕ್ತಿ ಗೌರವಗಳು ಪ್ರತಿಯೊಬ್ಬನಲ್ಲೂ ಬೆಳೆಯಬೇಕು. 'ಇದು ನಮ್ಮ ದೇಶ, ಇಲ್ಲಿನ ಪ್ರಜೆಗಳು ನಮ್ಮ ಸಹೋದರರು, ಪರಸ್ಪರ ಸಹಾಯ ಸಹಕಾರಗಳಿಂದ ಬಾಳ ಬೇಕಾದುದು ನಮ್ಮ ಹೊಣೆ ಎಂಬುದನ್ನು ಮಕ್ಕಳು ಮನಗಾಣಬೇಕು. ನಮ್ಮ ದೇಶವನ್ನು ಸಂರಕ್ಷಿಸುವುದು, ನಮ್ಮ ದೇಶದ ಕೀರ್ತಿಯನ್ನು ವಿವಿಧೆಡೆ ಪಸರಿಸುವುದು ದೇಶ ಪ್ರೇಮದ ದ್ಯೋತಕ.

'ಶ್ರೇಷ್ಠಧರ್ಮ' ಎಂಬ ಕಥೆಯನ್ನು, ಎಲ್ಲ ಧರ್ಮಗಳ ತಿರುಳೂ ಒಂದೇ, ಎಲ್ಲಾ ಧರ್ಮಗಳೂ ಸಮಾನ ಎಂಬ ವಿಚಾರವನ್ನು ಮಕ್ಕಳಲ್ಲಿ ಮೂಡಿಸುವುದಕ್ಕಾಗಿ ನೀಡಲಾಗಿದೆ. ಸರ್ವ ಧರ್ಮ ಸಮಾನವೆಂಬ ಭಾವನೆ ಭಾವೈಕ್ಯದ ಅಡಿಪಾಯವಾಗಿದೆ. ದೇಶ ಪ್ರೇಮವನ್ನು ಬೆಳೆಸುವುದಕ್ಕೋಸ್ಕರ 'ನನ್ನ ದೇಶ ನನ್ನ ಜನ' ಎಂಬ ದೇಶಭಕ್ತಿ ಗೀತೆಯನ್ನು ನೀಡಲಾಗಿದೆ.

ಮಾನವನ ಜೀವನದಲ್ಲಿ ಸೋಲು ಗೆಲುವುಗಳು ಸಹಜ. ಸೋಲು ಬಂದಾಗ ಕುಗ್ಗದೆ, ಗೆಲುವು ಬಂದಾಗ ಹಿಗ್ಗದೆ ಅವುಗಳನ್ನು ಸಮಾನವಾಗಿ ಸ್ವೀಕರಿಸಿ ಜೀವನವನ್ನು ನಡೆಸುವುದು ಒಂದು ಕಲೆ. ಈ ಜೀವನ ಕೌಶಲವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. 'ನಾದಲೀಲೆ' ಪಾಠಭಾಗದಲ್ಲಿ ಕಾಣುವ ರಸೂಲ್ ಪೂಕುಟ್ಟಿಯ ಸಾಧನೆ ಸ್ಫೂರ್ತಿದಾಯಕವಾಗಿದೆ.

ದೇಶದ ರಕ್ಷಣೆ ನಮ್ಮೆಲ್ಲರ ಹೊಣೆ. ಹಗಲಿರುಳೆನ್ನದೆ ದೇಶರಕ್ಷಣೆಯ ಮಹತ್ಕಾರ್ಯದಲ್ಲಿ ತೊಡಗಿರುವ ಸೈನಿಕರ ಸಾಹಸವಂತೂ ನಮಗೆ ಪ್ರೇರಣೆ ನೀಡುತ್ತದೆ. ಉತ್ತರಾಖಂಡದಲ್ಲಿ ಇತ್ತೀಚೆಗೆ ನಡೆದ ಭೀಕರ ನೆರೆ ಹಾವಳಿಯಲ್ಲಿ, ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಪರಿಹಾರ ಕಾರ್ಯಾಚರಣೆಗಿಳಿದ ಸೈನಿಕರ ದಿಟ್ಟತನ ನಮಗೆಲ್ಲ ಸ್ಫೂರ್ತಿಯನ್ನು ನೀಡುತ್ತದೆ. ಇಂತಹ ಉದಾತ್ತ ಗುಣಗಳನ್ನು ಮಕ್ಕಳಲ್ಲಿ ಬೆಳೆಸಲು ಪ್ರಯತ್ನಿಸೋಣ.

## ಕಲಿಕಾ ಸಾಧನೆಗಳು

1. ಆಲಿಸಿದ ವಿಚಾರಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಿ ಅಭಿಪ್ರಾಯವನ್ನು ಮೌಖಿಕವಾಗಿ ಪ್ರಕಟಿಸುವುದು.
2. ಭಾಷಾ ಘಟಕಗಳಾದ ಪದಗಳು, ನುಡಿಗಟ್ಟುಗಳು, ಗಾದೆಗಳು ಇತ್ಯಾದಿಗಳನ್ನು ಸಂದರ್ಭಾನುಸಾರ ಉಪಯೋಗಿಸಿಕೊಂಡು ಮಾತನಾಡುವುದು.
3. ರಾಗ,ತಾಳ, ಭಾವದೊಂದಿಗೆ ಮಂಡಿಸಿದ ಕವಿತೆಗಳನ್ನು ಆಲಿಸಿ ಆಸ್ವಾದಿಸುವುದು.
4. ಗದ್ಯ, ಪದ್ಯವನ್ನು ಭಾವಪೂರ್ಣವಾಗಿ ಉಚ್ಚಾರಣ ಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.
5. ಪ್ರಚಲಿತ ವಿದ್ಯಮಾನಗಳನ್ನು ವಾಚನ ಸಾಮಗ್ರಿಗಳ ಸಹಾಯದಿಂದ ಪರಿಶೀಲಿಸಿ ಸ್ವಂತ ರಚನೆಗಳನ್ನು ಉತ್ತಮಪಡಿಸುವುದು.
6. ಸ್ವಂತ ಆಸಕ್ತಿಯಿಂದ ಪುಸ್ತಕ ಮತ್ತು ಇತರ ವಾಚನ ಸಾಮಗ್ರಿಗಳನ್ನು ಕಂಡುಕೊಂಡು ಓದುವುದು.
7. ವಾಚನಾನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
8. ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಕೇಳಿದ, ಓದಿದ ವಿಚಾರಗಳನ್ನು ಅರ್ಥೈಸಿ, ಪ್ರಧಾನ ಆಶಯಗಳನ್ನು ತಪ್ಪಿಲ್ಲದೆ ಬರೆಯುವುದು, ಹೇಳುವುದು, ಭಾಷಣ ಮಾಡುವುದು.
9. ದಿನಚರಿ, ಆತ್ಮಕಥೆ, ಅನುಭವ ಟಿಪ್ಪಣಿ, ಜೀವನ ಚರಿತ್ರೆ ಮೊದಲಾದವುಗಳನ್ನು ಓದಿ ಸ್ವಂತ ಅನುಭವಗಳನ್ನು ಸೇರಿಸಿ ಸ್ವಯಂ ರಚನೆ ಮಾಡುವುದು.
10. ಸಂದರ್ಭಾನುಸಾರ ವಿಭಿನ್ನ ವ್ಯವಹಾರ ರೂಪಗಳನ್ನು ಆಯ್ದು ರಚನೆಗಳಲ್ಲಿ ತೊಡಗುವುದು ಮತ್ತು ಇನ್ನೊಂದು ವ್ಯವಹಾರ ರೂಪಕ್ಕೆ ಬದಲಾಯಿಸುವುದು.
11. ಸೃಜನಾತ್ಮಕ ಕೃತಿಗಳನ್ನು ತಯಾರಿಸುವುದು, ಅವುಗಳನ್ನು ತರಗತಿಯ ಭಿತ್ತಿ ಪತ್ರಿಕೆ, ಹಸ್ತ ಪತ್ರಿಕೆಗಳಲ್ಲಿ ಪ್ರಕಟಿಸುವುದು.
12. ವಿಭಿನ್ನ ಭಾಷಾನುಭವಗಳನ್ನು ಗಳಿಸಿ ಪದಗಳ ಪ್ರಯೋಗಗಳೇ ಮೊದಲಾದವುಗಳನ್ನು ಬಳಸಿಕೊಂಡು ರಚನೆಗಳನ್ನು ಮಾಡುವುದು.
13. ಕತೆ, ಕವಿತೆಗಳಲ್ಲಿ, ಲೇಖನಗಳಲ್ಲಿ ಸಂದರ್ಭಾನುಸಾರ ಲೇಖನ ಚಿಹ್ನೆಗಳನ್ನು ಬಳಸುವುದು.
14. ರಾಗ, ತಾಳ, ಭಾವಗಳಿಂದ ಕವಿತೆಗಳನ್ನು ಹಾಡುವುದು.

# ಯೂನಿಟ್ ಗ್ರಿಡ್ – 1. ಭರವಸೆಯ ಕಿರಣ

**ಪಾಠ 1 : ಶ್ರೇಷ್ಠ ಧರ್ಮ** **ಸಮಯ : 6 ಪಿರೇಡ್**

| ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಸರ್ವ ಧರ್ಮ ಸಮಾನವೆಂಬ ಆಶಯ ತಿಳಿಯುವುದು<br>• ಎಲ್ಲ ಧರ್ಮದವರನ್ನು ಗೌರವ ಭಾವನೆಯಿಂದ ಕಂಡು ಮತೀಯ ಸಾಮರಸ್ಯ ಕಾಪಾಡುವುದು<br>• ರಾಷ್ಟ್ರೀಯ ಭಾವೈಕ್ಯಕ್ಕೆ ಸಂಬಂಧಿಸಿದ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಧಾರಾಳ ಇವೆ ಎಂದು ತಿಳಿಯುವುದು | **1. ಚರ್ಚೆ**<br>• ಕತೆಯನ್ನು ಓದಿ ಆಶಯವನ್ನು ಗ್ರಹಿಸಿಕೊಂಡು ಚರ್ಚೆಯಲ್ಲಿ ಭಾಗವಹಿ ಸುವುದು<br>• ಆಶಯ ಗ್ರಹಣಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವುದು<br>**2. ಸಂಭಾಷಣೆ**<br>ಪಾಠಭಾಗದಲ್ಲಿ ಬರುವ ಕಥಾ ಪಾತ್ರಗಳನ್ನು ಕಂಡುಕೊಂಡು ಸೂಕ್ತವಾದ ಸಂಭಾ ಷಣೆಯನ್ನು ರಚಿಸುವುದು<br>**3. ಸ್ವಂತವಾಕ್ಯ ರಚನೆ**<br>ಅಡಿ ಗೆರೆ ಎಳೆದ ಪದಗಳ ಆಶಯುವನ್ನು ಗ್ರಹಿಸಿಕೊಂಡು ಸ್ವತಂತ್ರವಾಗಿ ವಾಕ್ಯ ರಚಿಸುವುದು<br>**4. ಲೇಖನ ಚಿಹ್ನೆಯ ಬಳಕೆ**<br>ಕಥೆಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಬಳಸಿ ಬರೆಯುವುದು<br>**5. ಪದ ಹುಡುಕಿರಿ**<br>ಕೊಟ್ಟ ಪದಗಳಿಂದ ಹೊಸ ಪದಗಳನ್ನು ಸೃಷ್ಟಿಸುವುದು<br>**6. ವಿರೋಧಾರ್ಥ ಪದಗಳು:** ಆಯಾ ಪದಗಳ ವಿರೋಧಾರ್ಥ ಪದಗಳನ್ನು ಗುರುತಿಸಿ ಜತೆಗೊಳಿಸುವುದು | ಭಾವೈಕ್ಯದ ಕಥೆಗಳು<br>ಸಂಭಾಷಣೆಯ ಭಾಗ/ ಅಧ್ಯಾಪಕರ ಮಾದರಿ<br>ಅರ್ಥಕೋಶ<br>ಕತೆ | • ಸಕ್ರಿಯವಾದ ಪಾಲ್ಗೊಳ್ಳುವಿಕೆ<br>• ಆಶಯ ಆವಿಷ್ಕಾರದ ರೀತಿ<br>• ಪ್ರಶ್ನೋತ್ತರ<br>• ಸಂಭಾಷಣೆ<br>• ರಚನೆ<br>• ಲೇಖನ ಚಿಹ್ನೆಗಳನ್ನು ಬಳಸಿ ಬರೆದ ಕತೆ<br>• ಪದಗಳು<br>• ಜತೆಗೊಳಿಸಿದ ಪದಗಳು |

## ಪಾಠ 2 : ನನ್ನ ದೇಶ ನನ್ನ ಜನ

**ಸಮಯ : 6 ಪಿರೇಡು**

| ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಪದ್ಯವನ್ನು ರಾಗ, ತಾಳ, ಭಾವ ಉಚ್ಚಾರಣ ಶುದ್ಧಿಯೊಂದಿಗೆ ಹಾಡುವುದು ಹಾಗೂ ಆಸ್ವಾದಿಸುವುದು. | • ಪದ್ಯವನ್ನು ಹಾಡಿ, ಆಲಿಸಿ, ಆಸ್ವಾದಿಸುವುದು<br>• ಪದ್ಯವನ್ನು ಓದಿ, ಚರ್ಚೆಯಲ್ಲಿ ಭಾಗವಹಿಸುವುದು | DVD | ಹಾಡುವಿಕೆ<br><br>ಸಕ್ರಿಯವಾದ ಪಾಲ್ಗೊಳ್ಳುವಿಕೆ |
| | • ಆಶಯ ಗ್ರಹಣ ಪ್ರಶ್ನೆಗಳಿಗೆ ಉತ್ತರ ಬರೆಯುವುದು | | ಪ್ರಶ್ನೋತ್ತರ |
| | • ಸಾಲು ಗುರುತಿಸುವುದು | | ಆಶಯಕ್ಕನುಗುಣವಾದ ಸಾಲು ಗುರುತಿಸುವುದು. |
| • ದೇಶ ಭಕ್ತಿಗೀತೆಗಳನ್ನು ಸಂಗ್ರಹಿಸುವುದು | • ಪದ್ಯವನ್ನು ಹೋಲಿಸಿ, ಸಾಮ್ಯ ವ್ಯತ್ಯಾಸಗಳನ್ನು ಗುರುತಿಸಿ ಬರೆಯುವುದು. | | ಹೋಲಿಸಿ ಬರೆದ ಟಿಪ್ಪಣಿ |
| • ದೇಶಪ್ರೇಮವನ್ನು ಬೆಳೆಸುವುದು<br>• ದೇಶ ಭಕ್ತಿಗೀತೆಗಳು ಕನ್ನಡ ಸಾಹಿತ್ಯದಲ್ಲಿ ಧಾರಾಳ ಇವೆ. | •ದೇಶ ಭಕ್ತಿಗೀತೆಗಳನ್ನು ಸಂಗ್ರಹಿಸಿ ಸಂಚಿಕೆ ಮಾಡುವುದು | ದೇಶ ಭಕ್ತಿಗೀತೆಗಳ ಪುಸ್ತಕ | ದೇಶ ಭಕ್ತಿಗೀತೆಗಳ ಸಂಚಿಕೆ |

**ಪಾಠ 3 : ನಾದಲೀಲೆ (ಗದ್ಯ)** **ಸಮಯ : 6 ಪಿರೇಡು**

| ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಆತ್ಮವಿಶ್ವಾಸ ಬೆಳೆಸಿಕೊಳ್ಳುವುದು ಜೀವನ ಕೌಶಲ್ಯ ವನ್ನು ಬೆಳೆಸುವುದು ಉತ್ತಮ ಆದರ್ಶಗಳನ್ನು ಸ್ವೀಕರಿ ಸುವುದು<br><br>• 'ಆತ್ಮಕಥೆ' ಸಾಹಿತ್ಯ ಪ್ರಕಾರದ ಪರಿಚಯ ಮಾಡಿಕೊಳ್ಳುವುದು | • ಜೀವನ ಚರಿತ್ರೆಯ ಭಾಗವನ್ನು ಓದಿ ಆಶಯವನ್ನು ಗ್ರಹಿಸಿ ಕೊಂಡು ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವುದು.<br><br>• ಅನುಭವ ಟಿಪ್ಪಣಿ<br>ರೈಲು ಪ್ರಯಾಣದ ಅನುಭ ವನ್ನು ಚರ್ಚಿಸಿ ಅನುಭವ ಟಿಪ್ಪಣಿ ಬರೆಯುವುದು.<br><br>• ಜಾಹೀರಾತು ತಯಾರಿಸುವುದು<br><br>•ದಿನಚರಿ ಬರೆಯುವುದು<br><br>•ಸೂಚನೆಗನುಸಾರ ಪದರಚನೆ ಮಾಡುವುದು<br><br>•ಸೂಚಿಸಿದಂತೆ ವಾಕ್ಯ ಬದಲಾಯಿಸಿ ಬರೆಯುವುದು | ಜಾಹೀರಾತು<br><br>ಜೀವನ ಚರಿತ್ರೆಯ ಪುಸ್ತಕಗಳು<br><br>ಪ್ರವಾಸಾನುಭವಗಳು | • ಸಕ್ರಿಯವಾದ ಪಾಲ್ಗೊಳ್ಳುವಿಕೆ<br><br>•ವಿಷಯ ಸಂಗ್ರಹ<br><br>•ಪ್ರಶ್ನೋತ್ತರ<br><br>•ಅನುಭವ ಟಿಪ್ಪಣಿ<br><br>•ಜಾಹೀರಾತು<br><br>•ದಿನಚರಿ |

## ಪಾಠ 4 : ಜೈ ಜವಾನ್

**ಸಮಯ : 6 ಪಿರೇಡು**

| ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ದೇಶ ಪ್ರೇಮವನ್ನು ಬೆಳೆಸುವುದು.<br>• ಸೈನಿಕರ ಸಾಹಸಗಳನ್ನು ತಿಳಿಯುವುದು<br>• ದೇಶ ರಕ್ಷಣೆಗಾಗಿ ಸದಾ ಸಿದ್ಧರಾಗಬೇಕೆಂಬ ಮನೋ ಭಾವ ಬೆಳೆಸುವುದು | • ಪಾಠವನ್ನು ಉಚ್ಚಾರಣ ಶುದ್ಧಿಯೊಂದಿಗೆ ಸ್ವರಭಾರಯುಕ್ತವಾಗಿ ನಿರರ್ಗಳವಾಗಿ ಓದುವುದು<br>• ಪ್ರಶ್ನೆಗಳಿಗೆ ಉತ್ತರ ಹೇಳಿಸುವುದು ಮತ್ತು ಬರೆಸುವುದು<br>• ವಿವರಣೆ ಬರೆಯುವುದು<br>• ಸೈನಿಕರ ಸಾಹಸ ಪ್ರವೃತ್ತಿ ಮನೋಭಾವ, ಕರ್ತವ್ಯ ನಿಷ್ಠೆಗಳ ಕುರಿತು ಚರ್ಚೆ ನಡೆಸುವುದು<br>• ಅನುಭವ ಟಿಪ್ಪಣಿ/ಜೀವನ ಚರಿತ್ರೆ/ದಿನಚರಿ ಮುಂತಾದವುಗಳಿಂದ ವಿವರ ಸಂಗ್ರಹಿಸಿ ಭಿತ್ತಿ ಪತ್ರಿಕೆ ತಯಾರಿಸುವುದು<br>• ಸಂದರ್ಶನ ನಡೆಸುವುದು<br>• ಪತ್ರಿಕಾ ವರದಿ ತಯಾರಿಸುವುದು | DVD<br>ಮುತ್ತಿನಹಾರದಂತಹ ಚಲನ ಚಿತ್ರಗಳ Cliping<br>ಅನುಭವ ಟಿಪ್ಪಣಿ/ ಜೀವನ ಚರಿತ್ರೆ/ ದಿನಚರಿ | ಓದುವಿಕೆ<br>ಪ್ರಶ್ನೋತ್ತರ ವಿವರಣೆ<br>ಸಕ್ರಿಯವಾದ ಪಾಲ್ಗೊಳ್ಳುವಿಕೆ<br>ಭಿತ್ತಿ ಪತ್ರಿಕೆ<br>ಪತ್ರಿಕಾ ವರದಿ |

# ಶ್ರೇಷ್ಠಧರ್ಮ

## ಪಾಠ ಪ್ರವೇಶ

ವಿದ್ಯಾರ್ಥಿಗಳೊಂದಿಗೆ ನಮ್ಮ ದೇಶದ ಕುರಿತು ಚರ್ಚಿಸುವುದು.

- ನಮ್ಮ ದೇಶ ಯಾವುದು?
- ನಮ್ಮ ದೇಶದ ಮಹಾಪುರುಷರು ಯಾರು ಯಾರು?
- ನಮ್ಮ ದೇಶದಲ್ಲಿ ಯಾರೆಲ್ಲ ವಾಸಿಸುತ್ತಾರೆ?

ನಮ್ಮ ದೇಶದಲ್ಲಿ ವಿವಿಧ ಮತ ಧರ್ಮಗಳ ಜನರು ಸಾಮರಸ್ಯದಿಂದ ಜೀವಿಸುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ಮೂಡಿಸುವುದರ ಮೂಲಕ ಪಾಠ ಪ್ರವೇಶ ಮಾಡಬಹುದು.

## ಚಟುವಟಿಕೆಗಳು

### ಊಹಿಸಿ ಹೇಳಿರಿ

ಮಕ್ಕಳು ಚಿತ್ರವನ್ನು ನೋಡಲಿ(ಪುಟನಂಬ್ರ–8). ಅವರು ಪರಸ್ಪರ ಏನು ಮಾತನಾಡುತ್ತಿರಬಹುದು? ಊಹಿಸಿ ಹೇಳಲಿ. ಪೂರ್ಣ ವಾಕ್ಯಗಳಲ್ಲಿ ಹೇಳುವಂತೆ ಪ್ರೋತ್ಸಾಹಿಸುವುದು.

### ಓದುವ

ಮಕ್ಕಳನ್ನು ಗುಂಪುಗಳಾಗಿಸುವುದು. ಪ್ರತಿಯೊಂದು ಗುಂಪಿನಿಂದಲೂ ಒಬ್ಬೊಬ್ಬರಾಗಿ ಬಂದು ಅನುಕ್ರಮವಾಗಿ ಓದುವುದು. ಯಾವ ಗುಂಪಿನವರು ತಪ್ಪಿಲ್ಲದೆ ಓದಿದ್ದಾರೆ? ಸರಿಯಾಗಿ ಓದಿದವರನ್ನು ಅಭಿನಂದಿಸುವುದು. ಅಧ್ಯಾಪಕರು ಪಾಠಭಾಗವನ್ನು ಸ್ವರಭಾರಯುಕ್ತವಾಗಿ ಉಚ್ಚಾರ ಸ್ಪಷ್ಟತೆಯೊಂದಿಗೆ ಓದುವುದು. ಓದಿದ ಬಳಿಕ ಎಲ್ಲಾ ಮಕ್ಕಳು ಹೊಸ ಪದಗಳನ್ನು ಗುರುತಿಸಿ ಹೇಳಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಸಂಗ್ರಹಿಸಿ ಬರೆಯುವುದು. ಅರ್ಥಕೋಶದ ಸಹಾಯದಿಂದ ಮಕ್ಕಳು ನವೀನ ಪದಗಳ ಅರ್ಥವನ್ನು ಕಂಡಕೊಳ್ಳಲಿ. ಅಧ್ಯಾಪಕರು ಸರಿಯಾದ ಅರ್ಥವನ್ನು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ತಾವು ಬರೆದುದರಲ್ಲಿ ತಪ್ಪಿದ್ದಲ್ಲಿ ಸರಿಪಡಿಸಿ ಬರೆಯಲಿ. ಆ ಬಳಿಕ ಶ್ರೇಷ್ಠ ಧರ್ಮ ಕಥೆಯ ಆಶಯವನ್ನು ಸ್ವಂತವಾಕ್ಯಗಳಲ್ಲಿ ಹೇಳಲಿ. ಆಶಯಗಳನ್ನು ಗ್ರಹಿಸಲು ಅಧ್ಯಾಪಕರು ಸಹಕರಿಸುವುದು.

### ಚರ್ಚಿಸುವ

ಹಿಂದಿನ ಕಾಲದ ವಿದ್ಯಾಭ್ಯಾಸ ಪದ್ಧತಿಯ ಕುರಿತಾದ ತಿಳುವಳಿಕೆಯನ್ನು ಮಕ್ಕಳಲ್ಲಿ ಮೂಡಿಸಬೇಕಾಗಿದೆ. ಅದಕ್ಕಾಗಿ ಮಕ್ಕಳು ಪರಸ್ಪರ ಚರ್ಚಿಸಿ ಹೇಳಲಿ. ಗುರುಕುಲ ಪದ್ಧತಿಯ ವಿದ್ಯಾಭ್ಯಾಸದ ಕುರಿತು ಅವರಿಗೆ ಅರಿವಿನ ಕೊರತೆಯಿದ್ದರೆ ಅಧ್ಯಾಪಕರು ಉದಾಹರಣೆಗಳೊಂದಿಗೆ ಆ ಪದ್ಧತಿಯನ್ನು ಸ್ಪಷ್ಟಪಡಿಸುವುದು.

ಉದಾ:

- ಶ್ರೀಕೃಷ್ಣನ ವಿದ್ಯಾಭ್ಯಾಸ – ಸಂದೀಪನಿ ಮುನಿಗಳ ಆಶ್ರಮದಲ್ಲಿ
- ಕುಶಲವರ ವಿದ್ಯಾಭ್ಯಾಸ – ವಾಲ್ಮೀಕಿ ಮುನಿಗಳ ಆಶ್ರಮದಲ್ಲಿ
- ನಲಂದ, ತಕ್ಷಶಿಲೆ, ಕಾಶಿ, ಶಾಂತಿನಿಕೇತನಗಳಲ್ಲಿನ ಶಿಕ್ಷಣ.

ಮಕ್ಕಳು ಪರಸ್ಪರ ಜಗಳವಾಡುವುದು ಸಾಮಾನ್ಯ. ಮಕ್ಕಳು ಇಂತಹ ಒಂದು ಜಗಳದ ಸನ್ನಿವೇಶವನ್ನು

ನೆನಪಿಸಿಕೊಳ್ಳಲಿ. ಈ ಜಗಳಕ್ಕೆ ಕಾರಣವೇನು? ಯೋಚಿಸಿ ತಿಳಿಯಲಿ. ಜಗಳವನ್ನು ಹೇಗೆ ನಿವಾರಿಸ ಬಹುದಿತ್ತು? ಏನು ಮಾಡಿದ್ದರೆ, ಏನು ಹೇಳಿದ್ದರೆ ಜಗಳವಾಗುತ್ತಿರಲಿಲ್ಲ? ನಾವು ಹೇಗೆ ಇತರರೊಂದಿಗೆ ವರ್ತಿಸಬೇಕು ಎಂಬುದನ್ನು ಚರ್ಚಿಸಿ ತಿಳಿಯಲು ಅವಕಾಶ ಒದಗಿಸುವುದು.

## ಉತ್ತರ ಬರೆಯಿರಿ

ಆಶಯ ಗ್ರಹಣಕ್ಕಾಗಿ ಮೂರು ಪ್ರಶ್ನೆಗಳನ್ನು ಕೊಡಲಾಗಿದೆ. ಗುಂಪಿನಲ್ಲಿ ಕುಳಿತು ಪ್ರಶ್ನೆಗೆ ಉತ್ತರ ಕಂಡು ಹುಡುಕಲಿ. ಅನಂತರ ಬರೆದು ಓದಲಿ. ಓದಿದ ಉತ್ತರವನ್ನು ತಪ್ಪಿದ್ದರೆ ಪುನಃ ಸರಿಪಡಿಸಿ ಬರೆಯಲಿ. ಸೂಕ್ತವಾದೆಡೆಗಳಲ್ಲಿ ಅಧ್ಯಾಪಕರ ಮಾದರಿ ಉತ್ತರವನ್ನು ಪ್ರದರ್ಶಿಸಬೇಕು.

## ಸ್ವಂತ ವಾಕ್ಯ ರಚಿಸಿರಿ

ಅಡಿಗೆ ಗೆರೆ ಎಳೆದ ಪದಗಳಿಗೆ ಸ್ವಂತ ವಾಕ್ಯ ರಚಿಸಬೇಕಿದೆ. ಅದಕ್ಕಾಗಿ ಕೊಟ್ಟಿರುವ ಗದ್ಯಭಾಗವನ್ನು ಗುಂಪಿನಲ್ಲಿ ಓದಿ ಪದಗಳನ್ನು ಗುರುತಿಸಿ ಬರೆಯಲಿ. ಆ ಬಳಿಕ ಪದಗಳ ಅರ್ಥವನ್ನು ಗ್ರಹಿಸಿ, ಸ್ವಂತ ವಾಕ್ಯಗಳನ್ನು ರಚಿಸಲಿ ಅಥವಾ ಆ ಪದಗಳನ್ನು ಬಳಸಿಕೊಂಡು ಗದ್ಯಭಾಗವನ್ನು ರಚಿಸಲಿ. ಅದನ್ನು ತರಗತಿಯಲ್ಲಿ ಮಂಡಿಸಿ, ಚರ್ಚಿಸಿ, ಉತ್ತಮಪಡಿಸಲು ಸಂದರ್ಭ ಒದಗಿಸುವುದು.

## ಸಂಭಾಷಣೆ ರಚಿಸಿರಿ

ಶ್ರೇಷ್ಠಧರ್ಮ ಪಾಠಭಾಗವನ್ನು ಈಗಾಗಲೇ ಮಕ್ಕಳು ಓದಿರುವರು. ಈ ಕತೆಯಲ್ಲಿ ನಿಮಗೆ ಇಷ್ಟವಾದ ಭಾಗ ಯಾವುದು? ಎಂದು ಪ್ರಶ್ನಿಸಿ ಉತ್ತರ ಹೇಳಿಸುವುದು. ಯಾಕೆ ಇಷ್ಟವಾಯಿತು ಎಂಬುದನ್ನು ಹೇಳಿಸಬಹುದು. ಆ ಬಳಿಕ ಇಷ್ಟವಾದ ಭಾಗದಲ್ಲಿ ಬರುವ ಪಾತ್ರಗಳನ್ನು ಗುರುತಿಸಲು ಹೇಳುವುದು. ಆ ಪಾತ್ರಗಳು ತಮ್ಮೊಳಗೆ ಮಾತಾಡಿಕೊಂಡರೆ ಹೇಗೆ? ಎಂದು ಚರ್ಚಿಸುವುದು. ಒಬ್ಬೊಬ್ಬರು ಒಂದೊಂದು ಪಾತ್ರವಾಗಿ ಮಕ್ಕಳೇ ಸ್ವತಂತ್ರವಾಗಿ ಯೋಚಿಸಿ ಮಾತನಾಡಲಿ. ಆ ಬಳಿಕ ಗುಂಪಿನಲ್ಲಿ ಕುಳಿತು ಸಂಭಾಷಣೆ ರಚಿಸಲಿ. ಅದನ್ನು ಕೈ ಬದಲಾಯಿಸಿ ಓದಿ ತಪ್ಪುಗಳನ್ನು ಗುರುತಿಸಿ ಸರಿಪಡಿಸಲು ಹೇಳುವುದು. ಸಂಭಾಷಣೆ ಪೂರ್ತಿಯಾಗಿ ಸಿದ್ಧವಾದ ಬಳಿಕ ಪಾತ್ರಗಳನ್ನು ಹಂಚಿ ಸಂಭಾಷಣೆಯನ್ನು ನಡೆಸಲಿ. ಸಂಭಾಷಣೆ ರಚನೆಗೆ ಸೂಕ್ತವಾದ ಮಾದರಿಗಳನ್ನು ಪ್ರದರ್ಶಿಸಬೇಕು.

### ಉತ್ತಮ ಸಂಭಾಷಣೆ ಹೇಗಿರಬೇಕು?

- ಅರ್ಥ ಗರ್ಭಿತವಾದ ಮಾತು
- ಔಚಿತ್ಯ ಪೂರ್ಣವಾದ ಮಾತು
- ಸರಳವೂ ಸ್ಪಷ್ಟವೂ ಆದ ಸಂಭಾಷಣೆ
- ಅಕ್ಷರ, ಪದ, ವಾಕ್ಯ ದೋಷಗಳು ಬರಬಾರದು
- ಪಾತ್ರದ ಘನತೆಗೆ ತಕ್ಕಂತೆ ಮಾತು ಇರಬೇಕು

## ಲೇಖನ ಚಿಹ್ನೆ ಬಳಸಿ ಬರೆಯಿರಿ

ಲೇಖನ ಚಿಹ್ನೆಗಳು ವಾಕ್ಯದ, ಪ್ಯಾರಾದ ಅರ್ಥ ಸ್ಪಷ್ಟತೆಗೆ ಅಗತ್ಯ. ಕತೆಗಳಲ್ಲಿ ಲೇಖನ ಚಿಹ್ನೆಗಳು ಹೇಗೆ ಆಶಯ ಸ್ಪಷ್ಟತೆಯನ್ನು ಉಂಟು ಮಾಡುತ್ತವೆ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕು. ಅದಕ್ಕಾಗಿ ಸರಳ ಕಥಾಭಾಗ, ಪಾರಾಗಳನ್ನು ನೀಡಿ ಅಭ್ಯಾಸ ಮಾಡಿಸಬೇಕು. ಈ ನಿಟ್ಟಿನಲ್ಲಿ ಕೊಟ್ಟಿರುವ ಕತೆಯನ್ನು ಓದಿ ಸೂಕ್ತವಾದ ಲೇಖನ ಚಿಹ್ನೆ ಸೇರಿಸಿ ಪುನಃ ಬರೆಯಲಿ. ಆ ಬಳಿಕ ಅಧ್ಯಾಪಕರ ಮಾದರಿಯ ಸಹಾಯದಿಂದ ಸ್ವಯಂ ಮೌಲ್ಯಮಾಪನ ನಡೆಸಿ ಉತ್ತಮ ಪಡಿಸಲಿ.

ಕಾಡಿನಲ್ಲಿ ದಷ್ಟಪುಷ್ಟವಾದ ಒಂದು ಕುದುರೆಯಿತ್ತು.

ಕುದುರೆಯನ್ನು ಕಂಡು ಹುಲಿಯ ಬಾಯಲ್ಲಿ ನೀರೂರಿತು. ಅಹಾ! ಎಂತಹ ಅದೃಷ್ಟ! ಇನ್ನು ಮೂರು ದಿನಗಳಿಗೆ ಆಹಾರ ಬೇಡ ಎಂದು ಮನದಲ್ಲೇ ಅಂದುಕೊಂಡಿತು. ಹೇಗಾದರೂ ಮಾಡಿ ಕುದುರೆಯನ್ನು ಬೇಟೆಯಾಡಲು ನಿರ್ಧರಿಸಿ, ಹೊಂಚು ಹಾಕಿತು. ಅಷ್ಟರಲ್ಲಿ ಕುದುರೆಗೆ ಹುಲಿಯ ಬರವು ತಿಳಿಯಿತು. ಅದು 'ಈ ಹುಲಿಯ ಕೈಯಿಂದ ಹೇಗೆ ಪಾರಾಗಲಿ'? ಎಂದು ಚಿಂತಿಸಿತು. ಅದಕ್ಕೆ ಒಂದು ಉಪಾಯ ಹೊಳೆಯಿತು. ಅದು ಕುಂಟುತ್ತಾ ಹುಲಿಯ ಬಳಿಗೆ ಸಾಗಿತು. 'ಹುಲಿಯಣ್ಣಾ, ಹುಲಿಯಣ್ಣಾ ನನ್ನ ಕಾಲಿಗೆ ಮುಳ್ಳು ತಾಗಿದೆ. ತೆಗೆದು ಸಹಾಯ ಮಾಡಲಾರೆಯಾ?' ಎಂದು ವಿನಯದಿಂದ ಕೇಳಿತು. ಹುಲಿ, 'ಅದಕ್ಕೇನು ತೊಂದರೆ? ಈಗಲೇ ತೆಗೆಯುತ್ತೇನೆ'. ಎನ್ನುತ್ತಾ ಕುದುರೆಯ ಹಿಂಭಾಗಕ್ಕೆ ಹೋಯಿತು. ಕುದುರೆಯು, 'ಸಿಕ್ಕಿದೆಯಾ ಕಳ್ಳ' ಎಂದು ಒಮ್ಮೆಗೇ ಬಲವಾಗಿ ಒದೆಯಿತು. ಒದೆತದ ರಭಸಕ್ಕೆ ಹುಲಿ ಮೂರು ಮಾರು ದೂರ ಹೋಗಿ ಬಿತ್ತು.

### ಪದ ಹುಡುಕಿರಿ

ಪದ ಹುಡುಕುವುದು ಒಂದು ಭಾಷಾ ಆಟವಾಗಿದೆ. ಇದು ಮಕ್ಕಳ ಪದ ಸಂಪತ್ತನ್ನು ಬೆಳೆಸಲು ಸಹಾಯ ಮಾಡುವುದಿಲ್ಲವೇ? ಕೊಡಲಾದ ಪದಗಳಲ್ಲದೆ ಸಾಕಷ್ಟು ಇತರ ಪದಗಳನ್ನು ಮಕ್ಕಳೆ ಗುರುತಿಸಿ ಪದದಿಂದ ಪದ ರಚಿಸಲು ಹೇಳುವುದು.

ಉದಾ:

ನಯನ ಮನೋಹರ : ನಯ, ನಯನ, ಮನೋಹರ, ನರ, ಮರ,ಹರ, ಮನ, ನಮನ, ಹಯ

ಗುರುಕುಲ ಪದ್ಧತಿ : ಗುರು, ಕುಲ, ಪದ್ಧತಿ, ಕುರು, ಪಲ, ಪತಿ, ತಿರುಗು, ತಲ, ದಲ, ತಿಲ

ಬಾಲ್ಯದ ಗೆಳೆಯ : ಬಾಲ್ಯ, ಗೆಳೆಯ, ದಯ, ಬಾಳೆ

ಪಾಠ ಪ್ರವಚನ : ಪಾಠ, ಪಾನ, ವಚನ, ಪ್ರವಚನ, ವನ, ಪಾವನ, ನವ.

### ಜತೆಗೊಳಿಸಿರಿ

ಪದಗಳನ್ನು, ವಿರೋಧಾರ್ಥ ಪದಗಳನ್ನು ಗುಂಪಿನಲ್ಲಿ ಕೊಡಲಾಗಿದೆ. ಮಕ್ಕಳು ಅವುಗಳನ್ನು ಗುರುತಿಸಿ ಬರೆಯಲಿ. ಆ ಬಳಿಕ ಆಯಾ ಪದಗಳಿಗೆ ಸರಿಯಾದ ವಿರೋಧಾರ್ಥ ಪದಗಳನ್ನು ಜತೆಗೊಳಿಸಿ ಬರೆದು ಓದಲಿ. ಪರಸ್ಪರ ಮೌಲ್ಯಮಾಪನ ನಡೆಸಿ, ಸರಿಯಾದ ವಿರೋಧಾರ್ಥ ಪದ ಗುರುತಿಸಲು ಅನುಕೂಲ ಮಾಡಿಕೊಡುವುದು ಅಗತ್ಯವಾಗಿದೆ.

### ಪೂರಕ ಓದಿಗೆ

## ಅಗ್ನಿಯ ರೆಕ್ಕೆಗಳು

ಮನುಷ್ಯರು ತಾವು ಏಕಾಂಗಿಯೆಂದು ಭಾವನೆ ಮೂಡಿದಾಗಲೆಲ್ಲಾ ಪ್ರಕೃತಿಸಹಜವಾಗಿ ಇನ್ನೊಬ್ಬರ ಒಡನಾಟಕ್ಕಾಗಿ ಬಯಸುತ್ತಾರೆ. ಕಷ್ಟವನ್ನು ಎದುರಿಸುವಾಗಲೂ ಇದೇ ಪರಿ. ಇನ್ನೊಬ್ಬರ ಸಹಾಯಕ್ಕಾಗಿ ಯಾಚನೆ, ದೈನ್ಯದೃಷ್ಟಿ, ಪರಸ್ಪರ ಸಹಾಯಕ್ಕಾಗಿ ಯಾಚನೆ, ಬೇಡಿಕೆ–ಜೀವನ ಸಂಗ್ರಾಮ. ಹೀಗಾಗಿ ಸಹಾಯ ಕೇಳಲು ಬರುವವರಿಗೆ ನಾನು ಆ ಪ್ರಾರ್ಥನೆಯಲ್ಲಿರುವ ಮಹಾಶಕ್ತಿ ಹಾಗೂ ಅದರಿಂದ ಕಷ್ಟನಿವಾರಣೆ ಸಾಧ್ಯತೆಯ ಬಗ್ಗೆ ಸ್ಪಷ್ಟವಾಗಿ ಹೇಳುತ್ತಿರುತ್ತೇನೆ. ಆದರೆ ಇದು ಎಲ್ಲಾಪ್ರಸಂಗಗಳಲ್ಲಿ ಸಾಧ್ಯವೆಂದು ಹೇಳಲಾಗದು. ಭವಿಷ್ಯದತ್ತ ಹೊಂದಿರುವ ಭಯ ಹಾಗೂ ಸಾಧನೆ ಹೊಂದಲು ಬೇಕಾಗಿರುವ ಆತ್ಮಶಕ್ತಿ ಇವುಗಳ ನಡುವಿನ ಅಂತರವನ್ನು ತಿಳಿಯಲು ನಾವು ಪ್ರಯತ್ನಿಸಬೇಕು.

ಸೂರ್ಯೋದಯದ ಮೊದಲು ಅಂದರೆ ಸಾಧಾರಣ

4 ಗಂಟೆಗೆ ನನ್ನ ತಂದೆ ನಮಾಜ್‌ನೊಂದಿಗೆ ದಿನವನ್ನು ಆರಂಭಿಸುತ್ತಿದ್ದರು. ಬಳಿಕ, ನಮಗೆ ಸೇರಿದ 4 ಮೈಲು ದೂರವಿರುವ ಚಿಕ್ಕ ತೆಂಗಿನ ತೋಟದತ್ತ ನಡೆದು ಹೋಗುತ್ತಿದ್ದರು. ಅಲ್ಲಿ ಕೆಲಸ ಮುಗಿಸಿ ಹಿಂದೆ ಬರುತ್ತಿದ್ದಾಗ ಎರಡೂ ಭುಜಗಳಲ್ಲಿ ತೊನೆದಾಡುವ ತೆಂಗಿನಕಾಯಿಗಳು. ಆ ಬಳಿಕವೇ ಅವರ ಬೆಳಗಿನ ಉಪಾಹಾರ ಸ್ವೀಕಾರ. ಅಂತಹ ಇಳಿವಯಸ್ಸಿನಲ್ಲಿಯೂ ಆ ದಿನಚರಿ ಸದಾ ಮುಂದುವರಿಯುತ್ತಿತ್ತು.

ತಂದೆಯ ಶಿಸ್ತು–ತತ್ವವನ್ನು ನಾನು ವೈಜ್ಞಾನಿಕ ಬಾಳಿನಲ್ಲಿ ಅನುಸರಿಸಲು ಪ್ರಯತ್ನಿಸಿದ್ದೇನೆ. ಅವರು ಹೇಳುತ್ತಿದ್ದ ಜಗತ್ತಿನ ಮೂಲಭೂತ ಸ್ವರೂಪ–ತತ್ವಗಳನ್ನು ನಂಬಿದ್ದಲ್ಲದೆ, ಖಂಡಿತವಾಗಿಯೂ ಅದ್ಭುತ ದೈವಿಕ ಶಕ್ತಿಯೊಂದಿದ್ದು ಇದು ಗೋಜಲು, ಕಷ್ಟ–ಕಾರ್ಪಣ್ಯ, ಸೋಲುಗಳ ರಾಜ್ಯದಿಂದ ಹಿಡಿದೆತ್ತಿ ವ್ಯಕ್ತಿಯನ್ನು ಸತ್ಯದ ಸ್ಥಾನಕ್ಕೆ ಕೊಂಡೊಯ್ಯ ಬಲ್ಲದು. ಹೀಗೆ ವ್ಯಕ್ತಿ ಭಾವನಾತ್ಮಕ ಹಾಗೂ ದೈಹಿಕ ಬಂಧನದಿಂದ ಹೊರಬಂದರೆ ಸ್ವಾತಂತ್ರ್ಯ, ಸುಖ ಹಾಗೂ ಮನಶ್ಶಾಂತಿಗಳ ಮಹಾಪಥಕ್ಕೆ ಬರುತ್ತಾನೆ ಎಂಬುದನ್ನು ಕಂಡುಕೊಂಡೆ.

ಬಹುಶಃ ನನಗೆ ಆರು ವರ್ಷಗಳಿರಬೇಕು. ತಂದೆಯವರು ರಾಮೇಶ್ವರಕ್ಕೆ ಬರುವ ತೀರ್ಥಯಾತ್ರಿಗಳಿಗಾಗಿ ರಾಮೇಶ್ವರಂ ಹಾಗೂ ಧನುಷ್ಕೋಡಿ (ಸೇತುಕ್ಕರೈ ಎಂದೂ ಹೇಳುತ್ತಾರೆ) ನಡುವೆ ನೀರು ದಾಟಲು ದೋಣಿಯೊಂದನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದರು. ಸಮುದ್ರ ತೀರದಲ್ಲಿಯೇ, ಸ್ಥಳೀಯ ಗುತ್ತಿಗೆದಾರರಾದ ಅಹಮದ್ ಜಲಾಲುದ್ದೀನ್ ನೆರವಿನಿಂದ ದೋಣಿ ನಿರ್ಮಾಣಕ್ಕೆ ತೊಡಗಿದರು. ಈ ಅಹಮದ್ ಜಲಾಲುದ್ದೀನ್ ಮುಂದೆ ನನ್ನ ಸೋದರಿ ಜೊಹರಾಳನ್ನು ಲಗ್ನವಾದರು. ಈ ದೋಣಿ ನಿರ್ಮಾಣ ಕಾರ್ಯವನ್ನು ನಾನು ಸೂಕ್ಷ್ಮವಾಗಿ ನೋಡುತ್ತಿದ್ದೆ. ದೋಣಿ ನಿರ್ಮಾಣವಾದ ಬಳಿಕ ತಂದೆಯವರು ಒಳ್ಳೆಯ ವ್ಯಾಪಾರ ಕುದುರಿಸಿದರಾದರೂ, ಮುಂದಿನ ದಿನಗಳಲ್ಲಿ ನಡೆಯಬಾರದ್ದು ನಡೆಯಿತು. ಗಂಟೆಗೆ ನೂರು ಮೈಲಿಗಳು ಮಿಕ್ಕಿ ಬೀಸಿದ ವೇಗದ ಬಿರುಗಾಳಿ ಸೇತುಕ್ಕರೈಯ ತೀರ ಪ್ರದೇಶದ ಮಣ್ಣು ಅಲ್ಲದೆ ಅಲ್ಲಿದ್ದ ದೋಣಿಗಳೆಲ್ಲವನ್ನೂ ಸಮುದ್ರದ ಗರ್ಭಕ್ಕೆ ಕೊಂಡೊಯ್ದಿತು. ಪಂಬನ್ ಸೇತುವೆ ಜನರಿಂದ ತುಂಬಿದ್ದ ರೈಲಿನೊಂದಿಗೆ ಕುಸಿದು ಬಿತ್ತು. ಅದುವರೆಗೆ ಸಮುದ್ರ ಸೌಂದರ್ಯವನ್ನು ಮಾತ್ರ ನೋಡಿದ್ದ ನನಗೆ ಅದರ ದೈತ್ಯ ಶಕ್ತಿಯ ಪರಿಚಯವಾದದ್ದು ಆಗಲೇ ಎಂದು ಹೇಳಬಹುದು.

ದೋಣಿ ಅಕಾಲ ಅಂತ್ಯವನ್ನು ಕಾಣುವಷ್ಟರಲ್ಲಿಯೇ ಅಹಮದ್ ಜಲಾಲುದ್ದೀನ್ ನನ್ನ ಆತ್ಮೀಯ ಸ್ನೇಹಿತನಾಗಿದ್ದ. ಅವನು ನನಗಿಂತ ಹದಿನೈದು ವರ್ಷ ದೊಡ್ಡವನು. ಅವನು ನನ್ನನ್ನು ಅಜಾದ್ ಎಂದು ಕರೆಯುತ್ತಿದ್ದು, ಮಸೀದಿ ರಸ್ತೆಯಿಂದ ಸಮುದ್ರ ಅಂಚಿಗೆ ಆಗಾಗ್ಗೆ ದೀರ್ಘ ವಾಕಿಂಗ್ ಹೋಗುವ ವೇಳೆ ನಾವು ಚರ್ಚಿಸದ ವಿಷಯವೇ ಇಲ್ಲ. ನಾನು ಹೆಚ್ಚಾಗಿ ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಚರ್ಚಿಸುತ್ತಿದ್ದೆ.

ರಾಮೇಶ್ವರಂ, ಅಲ್ಲಿಗೆ ಬರುವ ಯಾತ್ರಿಕರ ದಂಡು, ಈ ವಾತಾವರಣ ಖಂಡಿತವಾಗಿಯೂ ಇಂತಹ ಉದಾತ್ತ ವಿಚಾರಗಳಿಗೆ ಸ್ಫೂರ್ತಿ ನೀಡುವಂಥದ್ದೇ ಅಲ್ಲವೇ? ಅದೆಷ್ಟೋ ಬಾರಿ ರಾಮೇಶ್ವರಂನ ಶಿವನ ದೇವಸ್ಥಾನದ ಎದುರು ನಾವು ನಿಂತದ್ದು ಇದೆ. ಎಲ್ಲಾ ಯಾತ್ರಿಗಳಂತೆ ನಾವು ಪ್ರದಕ್ಷಿಣೆ ಬಂದಿದ್ದಿದೆ. ಆ ವೇಳೆ ಮೈಯಲ್ಲಿ ಏನೋ ಒಂದು ಪುಳಕ ಬಂದ ಕ್ಷಣಗಳಿವೆ.

ಜಲಾಲುದ್ದೀನ್ ದೇವರ ಬಗ್ಗೆ ಎಷ್ಟೊಂದು ಸುಲಭವಾಗಿ ಮಾತನಾಡುತ್ತಿದ್ದನೆಂದರೆ ಅವನಿಗೂ ಈ ಜಗದೀಶ್ವರನಿಗೂ ಏನೋ ನಿಕಟ ವ್ಯವಹಾರ ಇದ್ದ ಹಾಗೆ.

ಅವನು ಎಲ್ಲಾ ಸಮಸ್ಯೆಗಳನ್ನೂ ನೇರವಾಗಿ ಹೇಗೆ ಹೇಳುತ್ತಿದ್ದ ಎಂದರೆ, ಆ ದೇವರೆ ಇವುಗಳ ಪರಿಹಾರಕ್ಕಾಗಿ ನಮ್ಮೆದುರು ನಿಂತುಕೊಂಡಂತೆ ನಟಿಸುತ್ತಿದ್ದ.

ನಾನು ಆತನನ್ನು ಬಿಟ್ಟ ಕಣ್ಣುಗಳಿಂದ ನೋಡುತ್ತಿದ್ದೆ. ಮತ್ತೆ ಸಮುದ್ರದಲ್ಲಿ ಪವಿತ್ರ ಸ್ನಾನ ಮಾಡುವ, ಶಿವನಿಗೆ ಸುತ್ತುಹಾಕುವ ಹಿಂಡು ಹಿಂಡು ಯಾತ್ರಿಕರು, ಪೂಜೆ ಪುನಸ್ಕಾರ, ಸೇವೆ ಸಲ್ಲಿಸುವ ತಲ್ಲೀನತೆ. ಅವರೆಲ್ಲಾ ಪ್ರಾರ್ಥಿಸುವ ದೇವರು ಮತ್ತು ನಿರಾಕಾರ ಎಂದು ಭಾವಿಸುವ ನಮ್ಮ ಅಲ್ಲಾ–ಇವರಲ್ಲಿ ಖಂಡಿತ ವ್ಯತ್ಯಾಸ ಇರಲಾರದು. ದೇವಸ್ಥಾನಗಳಿಂದ ಹೊರಟ ಪ್ರಾರ್ಥನೆ ಇವೆಲ್ಲಾ ಒಂದೇ ಕಡೆ ಸೇರುತ್ತವೆ ಎಂಬುದರ ಬಗ್ಗೆ ನನಗೆ ಸಂಶಯವೇ ಇದ್ದಿರಲಿಲ್ಲ. ಆದರೆ ಸಂಶಯ ಇದ್ದದ್ದು ಒಂದೇ. ಈ ಜಲಾಲುದ್ದೀನ್ ಆ ದೇವರ ಒಟ್ಟಿಗೆ ಏನಾದರೂ ವಿಶೇಷ ಸಂಪರ್ಕ ಹೊಂದಿದ್ದನೇ? ಇಷ್ಟಾಗಿ, ಅವನ ಬಡತನದಿಂದಾಗಿ ಅವನು ಹೆಚ್ಚೇನೂ ಓದಿದವನಲ್ಲ. ಏನು ಆದರೂ ಅವನು ಸದಾ ನನ್ನ ಶಿಕ್ಷಣ ಹಾಗೂ ಯಶಸ್ಸಿಗಾಗಿ ಹುರಿದುಂಬಿಸುತ್ತಿದ್ದುದು ತಿಳಿಯಿತು. ಆದರೆ ಬದುಕಿನಲ್ಲಿ ತನಗೆ ಒದಗದೇ ಹೋದ ಸೌಭಾಗ್ಯದ ಬಗ್ಗೆ ಯಾವತ್ತೂ ಪರಿತಪಿಸಲಿಲ್ಲ. ತನಗೆ ಏನು ಸಿಕ್ಕಿದೆಯೊ ಅದರ ಬಗ್ಗೆ ದೇವರಿಗೆ ಸದಾ ಕೃತಜ್ಞನಾಗಿದ್ದ. ಆಗಿನ ಕಾಲದಲ್ಲಿ ಆ ದ್ವೀಪದಲ್ಲಿ ಓದುಬಲ್ಲ, ಬರೆಯಬಲ್ಲವ್ಯಕ್ತಿ ಮಾತ್ರ ಅವನೊಬ್ಬನೇ ಆಗಿದ್ದ.

ಯಾರೇ ನೆರವು ಯಾಚಿಸಿದರೂ ವಿವಿಧ ರೀತಿಗಳ ಅರ್ಜಿಗಳನ್ನು ಬರೆದು ಕೊಡುತ್ತಿದ್ದ. ಅವನಿಗೆ ಇರುವ ಜ್ಞಾನ ನಿಜವಾಗಿಯೂ ಉಲ್ಲೇಖನೀಯ. ಅವನು ಯಾವಾಗಲೂ ವಿಜ್ಞಾನಿಗಳು, ವಿದ್ಯಾವಂತರು, ಸಮಕಾಲೀನ ವಿಜ್ಞಾನ, ವೈದ್ಯಕೀಯ ಅನ್ವೇಷಣೆಗಳ ಬಗ್ಗೆ ಮಾತನಾಡುತ್ತಿದ್ದ. ನನಗೆ ಹೊರಗಿನ ಹೊಸ ಜಗತ್ತನ್ನು ತೋರಿಸಿಕೊಟ್ಟವನು ಅವನೇ ಎಂದು ಹೇಳಬಯಸುತ್ತೇನೆ.

ನನ್ನ ತೀರಾ ಬಡತನದ ವಾತಾವರಣದಲ್ಲಿ ಪುಸ್ತಕಗಳು ಖಂಡಿತವಾಗಿಯೂ ಅಪರೂಪದ ವಿಚಾರಗಳಾಗಿದ್ದವು. ಆದರೆ ಸ್ಥಳೀಯರ ಲೆಕ್ಕಾಚಾರದಂತೆ ಕ್ರಾಂತಿಕಾರಿ. ಕಟ್ಟಾ ರಾಷ್ಟ್ರೀಯವಾದಿ ಆಗಿದ್ದ ಎಸ್.ಟಿ.ಆರ್. ಮಾಣಿಕ್ಕಂ ಹೊಂದಿದ ಪುಸ್ತಕಗಳ ಸಂಖ್ಯೆ ನಿಜವಾಗಿಯೂ ಪ್ರಶಂಸನೀಯ. ಪುಸ್ತಕ ಓದಲು ಸದಾ ಪ್ರೋತ್ಸಾಹಿಸುತ್ತಿದ್ದ ಅವರ ಮನೆಗೆ ನಾನು ಆಗಾಗ್ಗೆ ಹೋಗುತ್ತಿದ್ದೆ. ಪುಸ್ತಕ ಎರವಲು ಪಡೆಯುತ್ತಿದ್ದೆ.

ನನ್ನ ಬಾಲ್ಯದಲ್ಲಿ ಪ್ರಭಾವ ಬೀರಿದ ಇನ್ನೋರ್ವ ವ್ಯಕ್ತಿ ನನ್ನ ಸಹೋದರ ಸಂಬಂಧಿ ಶಮ್‌ಸುದ್ದೀನ್, ಈತ ಇಡೀ ರಾಮೇಶ್ವರಕ್ಕೆ ವಾರ್ತಾ ಪತ್ರಿಕೆ ಹಂಚುತ್ತಿದ್ದ.

ಪಂಬನ್‌ನಿಂದ ಬೆಳಗ್ಗಿನ ರೈಲು ಪೇಪರ್ ಬಂಡಲ್‌ಗಳನ್ನು ತಂದಿಳಿಸುತ್ತಿತ್ತು. ಶಮ್‌ಸುದ್ದೀನ್ ರಾಮೇಶ್ವರಂನ 1000ಕ್ಕಿಂತಲೂ ಹೆಚ್ಚಿನ ಓದುಗರಿಗೆ ಇವುಗಳನ್ನು ವಿತರಿಸುತ್ತಿದ್ದ: ಇವುಗಳನ್ನು ಹಂಚುತ್ತಿದ್ದ ಓರ್ವ ಚಲಿಸುವ ವಿತರಣಾ ಕೇಂದ್ರ ಆಗಿದ್ದ. ಮುಖ್ಯವಾಗಿ ರಾಷ್ಟ್ರದ ಸ್ವಾತಂತ್ರ್ಯ ಹೋರಾಟ, ಭವಿಷ್ಯವಾಣಿ ಹಾಗೂ ಮದ್ರಾಸ್ ಷೇರು ಬಂಡವಾಳದ ಬಗ್ಗೆ ಮಾಹಿತಿ ತಿಳಿಯುವ ಉದ್ದೇಶ ಓದುಗರಿಗೆ ಇತ್ತು. ಇವರಲ್ಲಿ ಕೆಲವರಿಗೆ ಹಿಟ್ಲರ್, ಮಹಾತ್ಮ ಗಾಂಧಿ, ಜಿನ್ನಾ ಮೊದಲಾದ ನಾಯಕರ ಬಗ್ಗೆ ಮಾತನಾಡುವ ಹವ್ಯಾಸ ಇತ್ತು. ಆದರೆ ಕೊನೆಗೆ ಮೇಲ್ಜಾತಿ ಹಿಂದುಗಳ ವಿರುದ್ಧ ಪ್ರಬಲ ರಾಜಕೀಯ ಬಿರುಗಾಳಿ ಎಬ್ಬಿಸಿದ ಪೆರಿಯಾರ್ ರಾಮಸ್ವಾಮಿ ಬಗ್ಗೆವಿಷಯ ಬದಲಾಯಿಸುತ್ತಿದ್ದರು.

ಆಗ ಅತ್ಯಂತ ಬೇಡಿಕೆ ಇದ್ದ ಪತ್ರಿಕೆ ದಿನಮಣಿ. ಮುದ್ರಿತ ಶಬ್ದಗಳ ಬಗ್ಗೆ ನನಗೆ ಆಗ ಅತ್ಯಲ್ಪ ಜ್ಞಾನದಿಂದಾಗಿ ನಾನು ಅದರಲ್ಲಿ ಛಾಪಿಸಿದ ಫೋಟೋಗಳನ್ನು ನೋಡಿ ಸಮಾಧಾನ ಪಟ್ಟುಕೊಳ್ಳುತ್ತಿದ್ದೆ. ಎರಡನೇ ಮಹಾಯುದ್ಧ

1939ರಲ್ಲಿ ಆರಂಭಗೊಂಡಾಗ ನನಗೆ ಎಂಟು ವರ್ಷ.

ಒಮ್ಮಿಂದೊಮ್ಮೆಗೇ ಮಾರ್ಕೆಟ್‌ನಲ್ಲಿ ಬೆಲೆ ಏರಿಬಿಟ್ಟ ಹುಣಸೇ ಬೀಜದ ಬಗ್ಗೆ ನನಗೆ ಏನೂ ಕಲ್ಪನೆ ಇರಲಿಲ್ಲ. ನಾನು ಇದನ್ನು ಹೆಕ್ಕಿ ಮಸೀದಿಯ ಅಂಗಡಿಗೆ ಮಾರುತ್ತಿದ್ದೆ. ಹಾಗೆಯೇ ಮಾರಿದ ಒಂದು ದಿನದ ಸಂಗ್ರಹದಿಂದ ನನಗೆ ಲಭಿಸುತ್ತಿದ್ದ ಹಣ–ಒಂದಾಣೆ. ನಿಜವಾಗಿಯೂ ಅದು ದೊಡ್ಡ ನಿಧಿಯೇ ಆಗಿತ್ತು. ಜಲಾಲುದ್ದೀನ್ ಜಾಗತಿಕ ಯುದ್ಧದ ಬಗ್ಗೆ ಬಹಳಷ್ಟು ಹೇಳುತ್ತಿದ್ದ. ಅದನ್ನು ತಲೆಯಲ್ಲಿರಿಸಿ ದಿನ ಪತ್ರಿಕೆಯ ಶೀರ್ಷಿಕೆಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದೆ. ದ್ವೀಪವಾಗಿದ್ದ ನಮ್ಮ ಊರು ಹೊರಗಿನ ಪ್ರಪಂಚದ ಎಲ್ಲಾ ಸಂಪರ್ಕಗಳಿಂದ ವಂಚಿತವಾಗಿತ್ತು. ಹೀಗಾಗಿ ನಮಗೆ ಆ ಯುದ್ಧದ ಬಿಸಿಯು ಮುಟ್ಟಿರಲಿಲ್ಲ. ಆದರೆ ಭಾರತವು ಮಿತ್ರರಾಷ್ಟ್ರಗಳ ಕೈಗೂಡಿಸಿ ಯುದ್ಧದಲ್ಲಿ ಪಾಲುಗೊಂಡ ಬಳಿಕ ಒಂದು ರೀತಿಯ ತುರ್ತು ಪರಿಸ್ಥಿತಿ ವಾತಾವರಣ ತಲೆದೋರಿತ್ತು. ಇದರ ಪ್ರಥಮ ಹೊಡೆತವೋ ಎಂಬಂತೆ ಪೇಪರ್ ಬರುತ್ತಿದ್ದ ರೈಲು ರಾಮೇಶ್ವರದಲ್ಲಿ ನಿಲುಗಡೆ ರದ್ದು ಮಾಡಿತು. ಆದುದರಿಂದ ಓಡುತ್ತಿದ್ದ ರೈಲುಗಳಿಂದ ಬಂಡಲ್ ಮಾಡಿದ್ದ ಪೇಪರ್‌ಗಳನ್ನು ರಾಮೇಶ್ವರ ಮತ್ತು ಧನುಷ್ಕೋಡಿಗಳ ನಡುವೆ ಎಸೆಯುವುದು ತೀರಾ ಆವಶ್ಯವಾದ ಕ್ರಿಯೆ ಆಯಿತು. ಹೀಗಾಗಿ ಸಮ್‌ಶುದ್ದೀನ್ ಪೇಪರ್ ವಿತರಣಾ ಸಂಸ್ಥೆಗೆ ಯಾರದಾದರೂ ನೆರವು ಬೇಕಾಗಿಯೇ ಇತ್ತು. ಅಂತೆಯೇ ಈ ಕೆಲಸವು ನನಗೆ ಸುಲಭವಾಗಿ ದಕ್ಕಿತು. ಇದಕ್ಕೆ ಪ್ರತಿಯಾಗಿ ಶಮ್‌ಸುದ್ದೀನ್ ನನಗೆ ಸಂಬಳ ನೀಡುತ್ತಿದ್ದ. ಅಷ್ಟು ಸಣ್ಣ ಪ್ರಾಯದಲ್ಲಿಯೇ ಸಂಪಾದನೆಗಿಳಿದ ನನ್ನ ಆ ಕ್ಷಣಗಳನ್ನು ಎಣಿಸಿದರೆ ನನಗೆ ಹೆಮ್ಮೆಯಿಂದ ತಲೆಗೆ ಕೋಡು ಮೂಡಿದಂತಾಗುತ್ತದೆ.

***– ಎ.ಪಿ.ಜೆ. ಅಬ್ದುಲ್‌ಕಲಾಂ***

# ಮಾನವರಾಗೋಣ

ಮಾನವರಾಗೋಣ ಬನ್ನಿ ಮಾನವರಾಗೋಣ
ಮಾನವರಾಗೋಣ ನಾವು ಮಾನವರಾಗೋಣ

ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ
ಹಿಂದು ಮುಸಲ್ಮಾನ್ ಪಾರಸಿ ಕ್ರೈಸ್ತ
ಎಲ್ಲವೂ ಆಗಿ ಒಡಕಿಗೆ ಸಾಗಿ
ಬದುಕಿದರು ಸತ್ತು ಇರುವುದು ಸಾಕು ॥

ಅಡ್ಡಗೋಡೆಯನ್ನೊಡೆಯುತ ನಡೆದು
ಶೋಷಣೆ ಬೇರನು ಕಿತ್ತು ಎಸೆದು
ಸೋದರರೆಲ್ಲರೂ ಒಟ್ಟಾಗಿ ಕೂಡುತ್ತ
ಸವಿಯನ್ನೆಲ್ಲಾ ಸವಿಯೋಣ ಬನ್ನಿ ॥

ಎಲ್ಲರಿಗಿರಲಿ ನಿಲ್ಲಲು ನೆರಳು
ಎಲ್ಲ ಮಕ್ಕಳಿಗೂ ಕುಡಿಯಲು ಹಾಲು
ಹಾಸಲು ಹೊದೆಯಲು ಇರಲಿ ಬಟ್ಟೆ
ನೆಮ್ಮದಿ ಉಕ್ಕಲಿ ಎಲ್ಲರಿಗೆಂದೂ ॥

ಭೇದವನರಿಯದು ನೀಲಿಯ ಗಗನ
ಒಂದೇ ಮಣ್ಣಿಂದೆಲ್ಲರ ಜನನ
ಒಂದೇ ದಿಕ್ಕಿನಲೆಲ್ಲರ ಪಯಣ
ನುಡಿಯಲಿ ಮಿಡಿಯಲಿ ಅಂತಃಕರಣ ॥

***– ಜ.ಹೊ. ನಾರಾಯಣಸ್ವಾಮಿ***

# ನನ್ನ ದೇಶ ನನ್ನ ಜನ

ಮಕ್ಕಳಲ್ಲಿ ರಾಷ್ಟ್ರೀಯ ಭಾವೈಕ್ಯವನ್ನು ಮೂಡಿಸಬೇಕಾದುದು ಅಗತ್ಯ. ಈ ನಿಟ್ಟಿನಲ್ಲಿ 'ನನ್ನ ದೇಶ ನನ್ನ ಜನ' ಪದ್ಯವನ್ನು ಕೊಡಲಾಗಿದೆ.

ಇಂತಹ ಕವನಗಳನ್ನು ಸಂಗ್ರಹಿಸುವ, ಹಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳುವಂತೆ ಮಾಡಬೇಕು.

### ಚೆನ್ನವೀರ ಕಣವಿ

ಕನ್ನಡದ ಖ್ಯಾತ ವಿದ್ವಾಂಸರಾದ ಶ್ರೀ ಚೆನ್ನವೀರ ಕಣವಿಯವರು ಹೊಸಗನ್ನಡ ಕಾವ್ಯದ ಪ್ರಮುಖ ಕವಿಗಳಲ್ಲಿ ಒಬ್ಬರು. ಇವರು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ 1928 ಜೂನ್ ತಿಂಗಳ 28ನೇ ದಿನಾಂಕದಂದು ಜನಿಸಿದರು. ಇವರ ತಂದೆ ಸಕ್ಕರಪ್ಪ. ತಾಯಿ ಪಾರ್ವತವ್ವ. ಶಾಂತಾದೇವಿ ಇವರ ಪತ್ನಿ. ಆಕಾಶಬುಟ್ಟಿ, ಕಾವ್ಯಾಕ್ಷಿ, ಭಾವಜೀವಿ ಇವರ ಸಾಹಿತ್ಯ ಕೃತಿಗಳು . ಇವರು ಕೆಲವು ವಿಮರ್ಶಾ ಲೇಖನಗಳು, ಪ್ರಬಂಧಗಳು ಹಾಗೂ ಕವಿತೆಗಳನ್ನು ಬರೆದಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

### ಪಾಠ ಪ್ರವೇಶ

ವಿದ್ಯಾರ್ಥಿಗಳು ಈ ಹಿಂದೆ ಕಲಿತ ಯಾವುದಾದರೂ ದೇಶಭಕ್ತಿ ಗೀತೆಯನ್ನು ಹಾಡಲಿ. ಅಥವಾ ಅಧ್ಯಾಪಕರು ರಾಗವಾಗಿ ಯಾವುದಾದರೂ ದೇಶಭಕ್ತಿಗೀತೆಯನ್ನು ಹಾಡುವುದು ಇಲ್ಲವೇ ಧ್ವನಿಮುದ್ರಿಕೆಯನ್ನು ಆಲಿಸುವಂತೆ ಮಾಡುವುದು.

- ಈ ಪದ್ಯದಲ್ಲಿ ನೀವು ತಿಳಿದುಕೊಂಡುದೇನು?

ಯಾವ ವಿಷಯದ ಕುರಿತು ಈ ಪದ್ಯದಲ್ಲಿ ಹೇಳಲಾಗಿದೆ?

ದೇಶ ಭಕ್ತಿಯನ್ನು ಮೂಡಿಸುವಂತಹ ಇಂತಹ ಹಲವಾರು ಕವನಗಳಿವೆ. 'ನನ್ನ ದೇಶ ನನ್ನ ಜನ' ಅಂತಹ ಒಂದು ಕವನವಾಗಿದೆ ಎಂದು ಹೇಳಿ ಪಾಠ ಪ್ರವೇಶ ಮಾಡಬಹುದು.

### ಚಟುವಟಿಕೆಗಳು

### ಹಾಡಿರಿ

ಮಕ್ಕಳನ್ನು ಗುಂಪುಗಳಾಗಿ ಮಾಡಿ, ಪ್ರತಿಯೊಂದು ಗುಂಪು ಪದ್ಯವನ್ನು ಓದಿ ಅದಕ್ಕೆ ಸೂಕ್ತ ರಾಗಹಾಕಿ ಹಾಡುವಂತೆ ಹೇಳುವುದು. ಈ ಸಂದರ್ಭದಲ್ಲಿ ಅಧ್ಯಾಪಿಕೆ ಮೌಲ್ಯಮಾಪನ ಸೂಚಕಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಒಂದೊಂದು ಗುಂಪಿನಿಂದ ಹಾಡಿಸಿ, ಸೂಚಕಗಳ ಆಧಾರದಿಂದ ಅಂಕಗಳನ್ನು ನೀಡಿ, ಮೌಲ್ಯ ಮಾಪನ ಮಾಡುವುದು. ಅತಿ ಹೆಚ್ಚು ಅಂಕ ಗಳಿಸಿದ ಗುಂಪನ್ನು ಅಭಿನಂದಿಸುವುದು.

**ಸೂಚಕಗಳು ಯಾವುವೆಲ್ಲ?**

- ರಾಗ, ತಾಳ, ಲಯಗಳೊಂದಿಗೆ ಹಾಡುವುದು
- ಭಾವಪೂರ್ಣವಾಗಿ ಹಾಡುವುದು
- ಉಚ್ಚಾರ ಸ್ಪಷ್ಟತೆಯೊಂದಿಗೆ, ಅರ್ಥಪೂರ್ಣವಾಗಿ ಹಾಡುವುದು
- ತಂಡದ ಎಲ್ಲರನ್ನು ಪಾಲ್ಗೊಳ್ಳುವಂತೆ ಮಾಡುವುದು

### ಚರ್ಚೆಸಿರಿ

ಮಕ್ಕಳಲ್ಲಿ ಪದ್ಯವನ್ನು ಓದಲು ಹೇಳುವುದು. ಈ ಸಂದರ್ಭದಲ್ಲಿ ಅವರು ಹೊಸ ಪದಗಳನ್ನು ಗುರುತಿಸಿ ಹೇಳಲಿ. ಮೊದಲು ಮಾಡಿದ ಮಕ್ಕಳ ಒಂದೊಂದು ಗುಂಪಿಗೆ ಒಂದೊಂದು ಪದ್ಯ(ನಾಲ್ಕು ಸಾಲು)ವನ್ನು ಕೊಟ್ಟು ಹೊಸ ಪದಗಳನ್ನು ಗುರುತಿಸಲೂ ಅರ್ಥಕೋಶದ ಸಹಾಯದಿಂದ ಅರ್ಥ ಕಂಡುಕೊಳ್ಳಲೂ ಹೇಳಬಹುದು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕಂಡುಕೊಂಡ ಹೊಸಪದಗಳು ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ಬಾರದ ಇತರ ಪದಗಳನ್ನು ಮತ್ತು ಅವುಗಳ ಅರ್ಥಗಳನ್ನು ಕರಿಹಲಗೆಯಲ್ಲಿ ಬರೆಯುವುದು.

ಕೆಲವು ವಿದ್ಯಾರ್ಥಿಗಳಿಂದ ಪದ್ಯವನ್ನು ಹಾಡಿಸುವುದು. ಒಬ್ಬೊಬ್ಬರಿಂದ ಒಂದೊಂದು ಪದ್ಯವನ್ನು ಹಾಡಿಸಿ, ಎಲ್ಲಾ ವಿದ್ಯಾರ್ಥಿಗಳೂ ಬಾಯ್ದೆರೆಯಾಗಿ ಓದುವಂತೆಯೂ ಮಾಡಬಹುದು. ದೇಶದ ಋಣವನ್ನು ತೀರಿಸುವುದು ಹೇಗೆ? ಎಂಬುದರ ಕುರಿತು ಚರ್ಚೆ ನಡೆಸುವುದು. ಚರ್ಚಿಸಿ ವಿದ್ಯಾರ್ಥಿಗಳು ಮಂಡಿಸಲಿ. ಬಳಿಕ ಕ್ರೋಡೀಕರಿಸಿ ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.

### ಚರ್ಚೆಯಲ್ಲಿ ಮೂಡಿ ಬರಬೇಕಾದ ವಿಚಾರಗಳು

ನಾವು ದೇಶವನ್ನು ಪ್ರೀತಿಸಬೇಕು. ನಮ್ಮ ದೇಶದ ನೆಲ, ಬೆಳೆ, ಪ್ರಕೃತಿ ಸಂಪತ್ತುಗಳನ್ನು ಸಂರಕ್ಷಿಸಬೇಕು. ನಾವೆಲ್ಲರೂ ಒಂದೇ. ನಮ್ಮಲ್ಲಿ ಮೇಲು ಕೀಳು ಎಂಬ ಭಾವನೆ ಇರಬಾರದು. ಎಲ್ಲರೊಂದಿಗೂ ಪ್ರೀತಿಯಿಂದ, ಸಹಕಾರದಿಂದ ಬಾಳಬೇಕು. ನಾವು ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿಯೂ, ನಮ್ಮ ನಿಷ್ಠೆಯಿಂದಲೂ ಮಾಡಬೇಕು. ದೇಶಕ್ಕಾಗಿ ಹೋರಾಡಿದವರ, ಒಳಿತಿಗಾಗಿ ದುಡಿದವರ ಬಗ್ಗೆ ಗೌರವವಿರಬೇಕು. ರಾಷ್ಟ್ರಧ್ವಜ, ರಾಷ್ಟ್ರಗೀತೆ, ಪ್ರತಿಜ್ಞೆ–ಇತ್ಯಾದಿಗಳಲ್ಲಿ ಗೌರವ ತೋರಬೇಕು ಎಂಬಿತ್ಯಾದಿ ವಿಚಾರಗಳು ಚರ್ಚೆಯಲ್ಲಿ ಮೂಡಿ ಬರಬೇಕಲ್ಲವೇ?

### ಸಾಲು ಗುರುತಿಸಿರಿ

ಉತ್ತರಿಸಿರಿ ಚಟುವಟಿಕೆಗೆ ಮೊದಲು ಈ ಚಟುವಟಿಕೆ ಮಾಡುವುದು ಉತ್ತಮ. ಚೆನ್ನಾಗಿ ಹಾಡುವ ವಿದ್ಯಾರ್ಥಿಗಳಿಂದ/DVDಯ ಸಹಾಯದಿಂದ ಈ ಹಾಡನ್ನು ಆಲಿಸುವಂತೆ ಮಾಡುವುದು. ಬಳಿಕ ಆಶಯವಿರುವ ಸಾಲನ್ನು ವಿದ್ಯಾರ್ಥಿಗಳು ಗುರುತಿಸಲಿ. ಇಲ್ಲಿಯೂ ಆಶಯ ಗ್ರಹಣದ ಮೌಲ್ಯಮಾಪನ ಮಾಡಬಹುದು. ಎಲ್ಲಾ ಸಾಲುಗಳನ್ನು ಸರಿಯಾಗಿ ಗುರುತಿಸಿ ಬರೆದವರನ್ನು ಅಭಿನಂದಿಸಬಹುದು.

### ಉತ್ತರಿಸಿರಿ

ವಿದ್ಯಾರ್ಥಿಗಳಿಂದ ಪದ್ಯವನ್ನು ಓದಿಸುವುದು. ಬಳಿಕ ಪ್ರಶ್ನೆಗೆ ಉತ್ತರವನ್ನು ಬರೆಯಲು ಹೇಳುವುದು. ವಿದ್ಯಾರ್ಥಿಗಳು ಉತ್ತರವನ್ನು ಬರೆದು ಮಂಡಿಸಲಿ. ಅನಂತರ ಗುಂಪಿನಲ್ಲಿ ಚರ್ಚಿಸಿ ಉತ್ತಮಪಡಿಸಲಿ.

### ಉತ್ತರ ಹೀಗಿರಬಹುದು

ವಿವಿಧ ಭಾಷೆಗಳನ್ನು ಮಾತನಾಡುವ ಜನರು ನಮ್ಮ ದೇಶದಲ್ಲಿದ್ದಾರೆ. ಒಂದು ಪ್ರದೇಶದ ಜನರಿಗಿಂತ ಭಿನ್ನವಾದ ವೇಷಭೂಷಣಗಳನ್ನು ಮತ್ತೊಂದು ಪ್ರದೇಶದವರು ಧರಿಸುತ್ತಾರೆ. ನಮ್ಮ ದೇಶದಲ್ಲಿ ಕೆಂಪು, ಕಪ್ಪು, ಕಂದು ಹೀಗೆ ಹಲವು ತರದ ಮಣ್ಣುಗಳಿವೆ. ಹಲವು ವಿಧದ ಕೃಷಿಗಳನ್ನು ಮಾಡುತ್ತಾರೆ. ಹಲವಾರು ಧರ್ಮಗಳನ್ನು ಅನುಸರಿಸುವವರೂ ಇದ್ದಾರೆ. ನಮ್ಮ ದೇಶವು ವೈಶಿಷ್ಟ್ಯ

ಪೂರ್ಣವಾದ ಕಲೆಗಳ ನೆಲೆಮನೆಯಾಗಿದೆ. ಆದುದರಿಂದ ಕವಿಯು ನಮ್ಮ ದೇಶವು ವೈವಿಧ್ಯಪೂರ್ಣವಾಗಿದೆ ಎಂಬುದಾಗಿ ಹೇಳಿದ್ದಾರೆ.

## ಹೋಲಿಸಿರಿ

ಹೋಲಿಸಲು ಕೊಟ್ಟ ಪದ್ಯವನ್ನು ಅಧ್ಯಾಪಕರು ಗಟ್ಟಿಯಾಗಿ ಓದುವುದು, ಈ ಪದ್ಯವನ್ನು ವಿದ್ಯಾರ್ಥಿಗಳಲ್ಲಿ ಮೌನವಾಗಿ ಓದಲೂ ಹೇಳುವುದು. ಪದ್ಯದ ಆಶಯವನ್ನು ಹೇಳಿಸುವುದು. ಅದನ್ನು ಕ್ರೋಡೀಕರಿಸಿ ಕರಿಹಲಗೆಯಲ್ಲಿ ಬರೆಯುವುದು. ಅಧ್ಯಾಪಕರು ಮೊದಲೇ ತಖ್ತೆಯಲ್ಲಿ ಬರೆದು ತಂದು, ವಿದ್ಯಾರ್ಥಿಗಳು ಆಶಯ ಹೇಳಿದ ಬಳಿಕ ತಖ್ತೆಯನ್ನು ತೂಗು ಹಾಕುವುದು. 'ನನ್ನ ದೇಶ ನನ್ನ ಜನ'ಪದ್ಯದ ಆಶಯವನ್ನು ವಿದ್ಯಾರ್ಥಿಗಳು ಬರೆದು ಮಂಡಿಸಲಿ.

ಎರಡು ಪದ್ಯಗಳ ಆಶಯಗಳಲ್ಲಿರುವ ಸಾಮ್ಯಗಳನ್ನು ಕೆಲವು ವಿದ್ಯಾರ್ಥಿಗಳಿಂದಲೂ, ವ್ಯತ್ಯಾಸಗಳನ್ನು ಇತರ ಕೆಲವು ವಿದ್ಯಾರ್ಥಿಗಳಿಂದಲೂ ಹೇಳಿಸುವುದು. ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡಿ ಹೇಳಿಸಲೂ ಬಹುದು. ಅಧ್ಯಾಪಕರು ಕ್ರೋಡೀಕರಿಸಿ ಕರಿಹಲಗೆಯಲ್ಲಿ ಬರೆಯುವುದು. ವಿದ್ಯಾರ್ಥಿಗಳಿಂದ ಬರೆಸುವುದು.

### ಸಾಮ್ಯ

- ರಾಗ ಬದ್ಧವಾಗಿ ಹಾಡಬಹುದು
- ಪ್ರಾಸಬದ್ಧವಾಗಿದೆ
- ದೇಶಭಕ್ತಿಯನ್ನುಂಟುಮಾಡುತ್ತದೆ
- ಎಲ್ಲರಿಗೂ ಸಂತೋಷವುಂಟಾಗಲಿ ಎಂಬ ಆಶಯವಿದೆ
- ಹಳೆಯ ಕೊಳೆಯನ್ನು, ಮೂಢನಂಬಿಕೆಯನ್ನು ನೀಗಿಸಬೇಕು ಎಂದು ತಿಳಿಸಲಾಗಿದೆ.

### ವ್ಯತ್ಯಾಸ

- 'ನನ್ನ ದೇಶ ನನ್ನ ಜನ'(ಮೊದಲ) ಪದ್ಯವನ್ನು ಚೆನ್ನವೀರ ಕಣವಿ ಬರೆದಿದ್ದಾರೆ. ಎರಡನೆಯ ಪದ್ಯ ಡಾ.ಎಸ್. ನಾರಾಯಣ ಭಟ್ಟರು ಬರೆದಿದ್ದಾರೆ.
- ಮೊದಲನೆ ಪದ್ಯದಲ್ಲಿ ನಾಲ್ಕು ಸಾಲುಗಳ 5 ಪದ್ಯಗಳಿವೆ. ಎರಡನೇ ಪದ್ಯದಲ್ಲಿ 5 ಸಾಲುಗಳ ಮೂರು ಪದ್ಯಗಳಿವೆ.
- ಮೊದಲ ಪದ್ಯ ಸರಳವಾಗಿದೆ. ಎರಡನೇ ಪದ್ಯ ಸರಳವಾಗಿಲ್ಲ.
- ಮೊದಲ ಪದ್ಯದಲ್ಲಿ ದೇಶದ ಘನತೆಯನ್ನು ಹೇಳಲಾಗಿದೆ. ಎರಡನೇ ಪದ್ಯದಲ್ಲಿ ಒಗ್ಗಟ್ಟಿನಲ್ಲಿ ಬಾಳೋಣ ಎಂಬ ಆಶಯವಿದೆ.
- ಮೊದಲ ಪದ್ಯದಲ್ಲಿ ವಿವಿಧ ತರದ ಮಣ್ಣು, ವೇಷ,ಭಾಷೆ ಕೃಷಿಯ ಕುರಿತು ಹೇಳಲಾಗಿದೆ.
- ಎರಡನೇ ಪದ್ಯದಲ್ಲಿ ಎಲ್ಲರೂ ಸೇರಿ ಕೆಟ್ಟದನ್ನೆಲ್ಲ ಕಳೆದು ಉತ್ತಮ ಸಮಾಜದ ನಿರ್ಮಾಣ ವಾಗಬೇಕೆಂದು ಹೇಳಲಾಗಿದೆ.
- ಮೊದಲ ಪದ್ಯದಲ್ಲಿ ಸೋಮಾರಿತನ ಬಿಟ್ಟು ಎದ್ದೇಳಬೇಕೆಂಬ ಎಚ್ಚರಿಕೆಯಿದೆ.
- ಎರಡನೇ ಪದ್ಯದಲ್ಲಿ ಹಸಿವು, ರೋಗ, ಮೂಢನಂಬಿಕೆಗಳನ್ನು ನೀಗಿಸಿ ಎಲ್ಲರೂ ಸೇರಿ ಜನರ ಅಭಿವೃದ್ಧಿಗೆ ಒಂದಾಗೋಣ ಎಂಬ ಆಶಯವಿದೆ.

❑ **ಸಂಗ್ರಹಿಸಿರಿ**

## ಜೈ ಸ್ವತಂತ್ರ ಭಾರತ

ಜನುಮದಾತೆ ವಿಶ್ವವಂದ್ಯೆ
ನಮ್ಮ ತಾಯಿ ಭಾರತಿ |
ದಿಗ್ದಿಗಂತ ಬೆಳಗುತಿರಲಿ
ಭರತ ಭೂಮಿ ಕೀರುತಿ ||

ಜಾತಿ ನೀತಿ ಭೇದ ಭಾವ
ಮರೆತು ಸಮತೆ ಬೆಳೆಸುವ |
ಐಕ್ಯಮಂತ್ರ ನಮ್ಮದಿರಲಿ
ವಿಶ್ವಶಾಂತಿ ಉಳಿಸುವ ||
ದೇಶಕಾಗಿ ಪ್ರಾಣತ್ಯಾಗ
ಗೈದ ಜನರ ನೆನೆಯುವ |
ದೇಶ ಸೇವೆ ಈಶ ಸೇವೆ
ರಾಷ್ಟ್ರ ಹಿತಕೆ ಮಣಿಯುವ ||

ವಂಚನೆಗಳ ಸಂಚನೆಲ್ಲ
ತಿಳಿದು ಸೆಟೆದು ನಿಲ್ಲುವ |
ದ್ರೋಹಿಗಳನು ಒದೆದು ಸದೆದು
ಆತ್ಮಬಲದಿ ಗೆಲ್ಲುವ ||
ದೇಹಕಿಂತ ದೇಶ ಮೇಲು
ಎಂಬ ತತ್ವ ಸಾರುವ |
ಭರತ ಮಾತೆ ಸ್ವರ್ಣ ಗರ್ಭೆ
ಎನುವ ಸತ್ಯ ತೋರುವ ||

ಗಡಿಯ–ನುಡಿಯ ದ್ವೇಷ ಮರೆತು
ತಾಯ ಮಡಿಲ ಹಿರಿಮೆಗೆ |
ತಲೆಯ ಬಾಗಿ ನಡೆಯೆ ನಾವು
ಸಾಟಿಯುಂಟೆ ಹಿರಿಮೆಗೆ?

ಆಜಾದ್ ತಿಲಕ ಬೋಸರಿಂದ
ಬೆಳೆದ ಘನ ಪರಂಪರೆ |
ದೇಶಭಕ್ತಿ ಸುಧೆಯು ಹರಿದ
ಪುಣ್ಯ ತಾಣವೀ ಧರೆ ||

ದಾಹಮೋಹ ಸ್ವಾರ್ಥ ಮೋಸ
ಸೋಕದಿರಲಿ ಜನತೆಗೆ |
ಕೊರತೆಯಹುದು ಭಾರತೀಯ
ರೆಂಬ ನಮ್ಮ ಘನತೆಗೆ ||

ಜೈ ಸ್ವತಂತ್ರ ಮಧುರ ಮಂತ್ರ
ಮುಗಿಲು ಮುಟ್ಟಿ ಗುಡುಗಲಿ |
ಜನ್ಮಭೂಮಿ ರಕ್ಷೆಗಾಗಿ
ಆಗು ಚಿಣ್ಣ ಕಡುಗಲಿ ||

ಮಂದಹಾಸದಿಂದ ನಲಿಯ
ಲೆಮ್ಮ ತಾಯಿ ಭಾರತಿ |
ಈ ಸ್ವತಂತ್ರ ಹೃದಯದಿಂದ
ಬೆಳಗು ಭಕ್ತಿಯಾರತಿ ||

*– ಡಾ। ನಾರಾಯಣ ಭಟ್*

## ಭಾರತಿ ನಿನ್ನಯ ಅಡಿಗಳಿಗೆ

ಭಾರತಿ ನಿನ್ನಯ ಅಡಿಗಳಿಗೆ
ಪೊಡಮಡುವೆ, ನಾ ಅಡಿಗಡಿಗೆ
ಜನನೀ, ಓ ಜನನೀ
ಜನನೀ ಜನ್ಮಭೂಮಿ

ಜನ್ಮ ಜನ್ಮದಾ ಪುಣ್ಯದ ಫಲವೊ
ಕರುಣೆಯ ತೋರಿದ ಒಲವಿನ ಬಲವೊ
ಬಂದಿಹೆ ಧರೆಗೆ ನಿನ್ನೊಡಲೊಳಗೆ
ಕೋಟಿ ಕೋಟಿ ಜನ ಸೋದರರೆನಗೆ

ಮೇಲೆ ಹಿಮಾಚಲ ಕಾಲಡಿ ಕಡಲು
ಬಂಗಾರದ ನಿಧಿ ತುಂಬಿದೆ ಒಡಲು
ಶ್ರೀಗಂಧದ ಸೌಗಂಧವು ತುಂಬ
ಏನೆಂಬೆನು ನೀ ಸ್ವರ್ಗದ ಬಿಂಬ

ಉಜ್ವಲ ಕಲೆ ಸಂಸ್ಕೃತಿಗಳ ನಾಡು
ಕೆಚ್ಚೆದೆ ಕಲಿಗಳ ಸಾಹಸ ಬೀಡು
ಶಂಕರ ಬಸವ ವಿವೇಕರ ನೆಲವು
ಪಾವನವು–ಸೌಭಾಗ್ಯದ ಫಲವು

ಸಾವಿರ ಜನ್ಮವು ಬಂದರೆ ಬರಲಿ
ತಾಯೇ ನಿನ್ನಯ ಮಡಿಲೆನಗಿರಲಿ
ನಿನ್ನಲೆ ಜನನ ನಿನ್ನಲೆ ಮರಣ
ನನ್ನಯ ಜೀವನ ನಿನಗೆ ಶರಣ

*– ಡಾ। ನಾರಾಯಣ ಭಟ್*

## ಎಲೆಗಳು ನೂರಾರು

ಎಲೆಗಳು ನೂರಾರು ಭಾವದ ಎಳೆಗಳು ನೂರಾರು
ಎಲೆಗಳ ಬಣ್ಣ ಒಂದೇ ಹಸಿರು
ಜಾತಿ ಭಾಷೆ ಪಂಥ ಹಲವು
ಅವುಗಳ ಹಿಂದೆ ಮಾತ್ರ ಒಂದೇ ಒಲವು.

ಸಾಗೋಣ ಒಟ್ಟಿಗೆ ಸಾಗೋಣ
ನಾವು ನೀವು ಸೇರಿ ಒಂದಾಗಿ
ನೀಗೋಣ ಭಿನ್ನತೆ ನೀಗೋಣ
ಸಾವಿರ ಹೆಜ್ಜೆ ಒಂದೆ ಗುರಿಗಾಗಿ

ಕಿಡಿಗಳು ನೂರಾರು ಬೆಳಕಿನ ಕುಡಿಗಳು ನೂರಾರು
ಬೆಳಕಿನ ಪರಿಗೆ ಒಂದೆ ಹಸರು
ಸೂರ್ಯ ಚಂದ್ರ ಲಾಂದ್ರ ಹಣತೆ
ಅವುಗಳ ಹಿಂದೆ ಮಾತ್ರ ಒಂದೆ ಘನತೆ

ತೆರೆಯೋಣ ಹೃದಯ ತೆರೆಯೋಣ
ನಾವು ನೀವು ಸೇರಿ ಒಂದಾಗಿ
ಮರೆಯೋಣ ಭೇದ ಮರೆಯೋಣ
ನದಿಗಳು ಕೂಡಿದ ಪ್ರೀತಿಯ ಕಡಲಾಗಿ

ಪದಗಳು ನೂರಾರು ಬದುಕಿನ ಹದಗಳು ನೂರಾರು
ಪದಗಳ ಹಿಂದೆ ಒಂದೇ ಉಸಿರು
ಅಕ್ಕರೆಯಿಂದ ಒಟ್ಟಿಗೆ ಬಾಳೋಣ
ಭಾರತ ಮಾತೆಗೆ ನಮ್ಮ ಪ್ರೀತಿ ತೋರೋಣ

ಕಟ್ಟೋಣ ನಾಡನು ಕಟ್ಟೋಣ
ನಾವು ನೀವು ಸೇರಿ ಒಂದಾಗಿ
ಮುಟ್ಟೋಣ ಮಾಡನು ಮುಟ್ಟೋಣ
ತಾರೆಗಳೆ ಈ ನಾಡಿನ ಸೂರಾಗಿ

*– ಡಾ।ಎಚ್.ಎಸ್. ವೆಂಕಟೇಶ ಮೂರ್ತಿ*

## ಐದು ಬೆರಳು ಕೂಡಿ

ಐದು ಬೆರಳು ಕೂಡಿ ಒಂದು ಮುಷ್ಟಿಯು
ಹಲವು ಮಂದಿ ಸೇರಿ ಈ ಸಮಷ್ಟಿಯು
ಬೇರೆ ಬೇರೆ ಒಕ್ಕಲು
ಒಂದೆ ತಾಯ ಮಕ್ಕಳು
ಕೂಡಿ ಹಾಡಿದಾಗ ಗೆಲುವು ಗೀತೆಗೆ – ಭರತ ಮಾತೆಗೆ
ಮೊಳಗಲಿ ಮೊಳಗಲಿ ನಾಡಗೀತವು
ಮೂಡಲಿ ಮೂಡಲಿ ಸುಪ್ರಭಾತವು
ಹಿಮಾಲಯದ ನೆತ್ತಿಯಲ್ಲಿ ಕಾಶ್ಮೀರದ ಭಿತ್ತಿಯಲ್ಲಿ
ಅಸ್ಸಾಮಿನ ಕಾಡಿನಲ್ಲಿ ಐದು ನದಿಯ ನಾಡಿನಲ್ಲಿ
ಹೊತ್ತಿ ಉರಿವ ಬೆಂಕಿ ಆರಿ ತಣ್ಣಗಾಗಲಿ
ಬಂಜರಲ್ಲಿ ಬೆಳೆದು ಹಚ್ಚ ಹಸಿರು ತೂಗಲಿ
ಗಂಗೆ – ತುಂಗೆ ಕಾವೇರಿಯ ತಬ್ಬಿಕೊಳ್ಳಲಿ
ಲಡಾಕ ನೇಫ ಗಡಿಗಳಲ್ಲಿ ಯಂತ್ರಾಲಯ ಗುಡಿಗಳಲ್ಲಿ
ಭತ್ತ ಗೋಧಿ ಬೆಳೆಯುವಲ್ಲಿ ಪ್ರೀತಿಯು ಮೈ ತಳೆಯುವಲ್ಲಿ
ದುಡಿವ ಹಿಂದು ಮುಸಲ್ಮಾನರೊಂದುಗೂಡಲಿ
ಆರದಿರಲಿ ಪ್ರೀತಿ ದೀಪ ಕಣ್ಣಗೂಡಲಿ
ಎದೆಯ ಕೊಳೆಗಳನ್ನು ಅಶ್ರುಧಾರೆ ತೊಳೆಯಲಿ.

*– ಡಾ।ಎಚ್.ಎಸ್.ವೆಂಕಟೇಶ ಮೂರ್ತಿ*

## ಭಾರತಾಂಬೆಯ ಮಹಿಮೆ

ಭಾರತವನುಳಿಯುತ್ತ ನನಗೆ ಜೀವನವೆತ್ತ?
ಭಾರತವೆ ನನ್ನುಸಿರು, ನನ್ನೊಗೆವ ಬಸಿರು;
ಭಾರತವೆ ಧನಧಾನ್ಯ, ಭಾರತವೆ ಮನೆ ಮಾನ್ಯ
ಭಾರತವೆ ದೇವಾರವೆನ್ನ ಸಂಸಾರ.
ಭಾರತದ ತಿಳಿಜಲವು ಸೊದೆಯ ಸವಿ ಸೆಳವು;
ಭಾರತದ ಶ್ಯಾಮಲತೆ ತನುಮನಕೆ ಕಾಮಲತೆ,
ಭಾರತದ ಪಶುಪಕ್ಷಿ ವೈಚಿತ್ರ್ಯ ಸಾಕ್ಷಿ
ಭಾರತದ ಸಕ್ಕದವು ಜ್ಞಾನನಿಧಿಯೊಕ್ಕದವು,
ಭಾರತ ಪಲ ಮಾತೆ ಮೇಳವದ ಗೀತೆ;
ಭಾರತದ ಶುಭಚರಿತ ಧರೆಗೆ ಧರ್ಮದ ಕರೆತ,
ಭಾರತದ ಜಯಮೂರ್ತಿ ಮನ್ಮನಃಪೂರ್ತಿ;
ಭಾರತದ ಸೋದರಿಕೆ ನನ್ನ ದಿನದಿನದೆರಕೆ,
ಭಾರತ ಯಶೋಗಾನವೆನ್ನೆದೆಯ ತಾನ.
ಭಾರತದ ಮಂಗಲವು ಭವನವಲ್ಲಭನೊಲವು,
ಭಾರತ ಸಮುಚ್ಛ್ರಯವು ಶಾಂತಿಗಾಶ್ರಯವು;
ಭಾರತದ ಜನಕುಲವು ಭುವಿಯ ಬಳಗಕೆ ಬಲವು
ಭಾರತಾಂಬೆಯ ಭಕ್ತಿ ನನಗಾತ್ಮಶಕ್ತಿ

*– ಗೋವಿಂದ ಪೈ*

# ನಾದಲೀಲೆ

## ಪಾಠ ಪ್ರವೇಶ

ಪುಟ ನಂಬ್ರ 15 ಮತ್ತು 16ರ ಗದ್ಯಭಾಗವನ್ನು ಆಯ್ದುಕೊಳ್ಳುವುದು. ವಿದ್ಯಾರ್ಥಿಗಳು ಮೌನವಾಗಿ ಓದಲಿ. ಆ ಬಳಿಕ ಒಬ್ಬೊಬ್ಬರಾಗಿ, ಓದಿದ ಭಾಗದಿಂದ ತಾವು ತಿಳಿದುದನ್ನು ಬಾಯ್ದೆರೆಯಾಗಿ ಹೇಳಲಿ. ಪೂರ್ಣ ಆಶಯವನ್ನು ಗ್ರಹಿಸಿದ ಮಕ್ಕಳನ್ನು ಅಭಿನಂದಿಸುವುದು.

(ಪೂರ್ಣ ವಾಕ್ಯಗಳಲ್ಲಿ ಹೇಳುವಂತೆ ಮಕ್ಕಳನ್ನು ಪ್ರೇರೇಪಿಸುವುದು)

## ಚರ್ಚಿಸುವ

ಪತ್ರಿಕೆಗಳಲ್ಲಿ ಬಂದ ಯಾವುದಾದರೊಂದು ಜಾಹೀರಾತನ್ನು ತೋರಿಸುವುದು. ಅವುಗಳ ಸಾಧಕ ಬಾಧಕಗಳ ಕುರಿತು ಮಕ್ಕಳಿಂದ ಹೇಳಿಸುವುದು. ಸಾಮಾನ್ಯ ಜಾಹೀರಾತುಗಳು ಉಂಟುಮಾಡುವ ಕೆಡುಕುಗಳ ಕುರಿತು ವಿಶ್ಲೇಷಣೆ ನಡೆಸುವುದು.

ಉದಾಹರಣೆಗಾಗಿ ದಿನಪತ್ರಿಕೆಗಳಿಂದ ಸಂಗ್ರಹಿಸಿದ ಜಾಹೀರಾತುಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು.

ಜಾಹೀರಾತುಗಳಲ್ಲಿ ಹಲವು ವಿಧಗಳಿವೆ.

- ವ್ಯಾಪಾರವನ್ನು ಹೆಚ್ಚಿಸುವುದಕ್ಕಾಗಿ ಸಿದ್ಧಪಡಿಸಿದ ಜಾಹೀರಾತುಗಳು
- ಜನರಿಗೆ ಮಾಹಿತಿಯನ್ನು ನೀಡುವುದಕ್ಕಾಗಿರುವ ಜಾಹೀರಾತುಗಳು
- ಜನರಲ್ಲಿ ಜಾಗೃತಿ ಮೂಡಿಸುವ ಜಾಹೀರಾತುಗಳು

ವ್ಯಾಪಾರ ದೃಷ್ಟಿಯಿಂದ ಸಿದ್ಧಪಡಿಸಲಾದ ಜಾಹೀರಾತುಗಳು ವಿಶ್ವಾಸಾರ್ಹವಲ್ಲ ಎಂಬ ವಿಚಾರವನ್ನು ಮಕ್ಕಳಲ್ಲಿ ಮನದಟ್ಟುಪಡಿಸುವುದು.

## ಜಾಹೀರಾತು ತಯಾರಿಸುವ

ಜಾಹೀರಾತಿನ ಹಲವು ಮಾದರಿಗಳನ್ನು ಪತ್ರಿಕೆಗಳಿಂದ/ಇತರೆಡೆಗಳಿಂದ ಸಂಗ್ರಹಿಸಿಕೊಂಡು ಬರಲು ಮಕ್ಕಳಲ್ಲಿ ಹೇಳುವುದು. ಜಾಹೀರಾತಿಗೆ ಸಂಬಂಧಿಸಿದ ಪ್ರೋಜೆಕ್ಟ್‌ನ್ನು ತಯಾರಿಸಬಹುದಲ್ಲವೇ?

ಶಾಲೆಯಲ್ಲಿ ವಾರ್ಷಿಕೋತ್ಸವ ಇದೆ. ಪರಿಸರವನ್ನೂ ರಂಗಸ್ಥಳವನ್ನೂ ಅಲಂಕರಿಸಬೇಕಾಗಿದೆ. ಅದಕ್ಕಾಗಿ ಸೂಕ್ತ ವ್ಯಕ್ತಿಗಳು ಬೇಕಾಗಿದ್ದಾರೆ. ಈ ಬಗ್ಗೆ ಜಾಹೀರಾತು ತಯಾರಿಸಲು ಮಕ್ಕಳಲ್ಲಿ ಹೇಳುವುದು. ವೈವಿಧ್ಯಮಯವಾಗಿ ಜಾಹೀರಾತು ತಯಾರಿಸಲಿ. ತರಗತಿಯಲ್ಲಿ ಪ್ರದರ್ಶಿಸಲಿ.

### ಬೇಕಾಗಿದ್ದಾರೆ

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾನಗರ – ಇದರ ಅಮೃತ ಮಹೋತ್ಸವದ ಪ್ರಯುಕ್ತ ನಡೆಯುವ ಸಮಾರಂಭಕ್ಕೆ ಶಾಲಾ ಪರಿಸರ ಹಾಗೂ ರಂಗಮಂದಿರವನ್ನು ಅಲಂಕರಿಸಲು ಯೋಗ್ಯ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಪರ್ಕಿಸಬೇಕಾದ ವಿಳಾಸ

**ಕಾರ್ಯದರ್ಶಿ**

ಅಮೃತ ಮಹೋತ್ಸವ ಸಮಿತಿ
ಜಿ.ಯು.ಪಿ. ಶಾಲೆ ವಿದ್ಯಾನಗರ.

## ಓದುವ

ಪುಟ ನಂಬ್ರ 17 ಮತ್ತು ಅನಂತರದ ಪಾಠಭಾಗವನ್ನು ಓದಲಿ.

ವಿದ್ಯಾರ್ಥಿಗಳು ಗುಂಪುಗಳಾಗಿ ನಿರ್ದಿಷ್ಟ ಸಮಯದಲ್ಲಿ ಪಾಠಭಾಗವನ್ನು ಓದುವುದು. ಬಳಿಕ ಅಧ್ಯಾಪಕರು ಮೊದಲು ಸಿದ್ಧ ಪಡಿಸಿದ ಸರಿ–ತಪ್ಪು ಹೇಳಿಕೆಗಳನ್ನು ಪ್ರದರ್ಶಿಸುವುದು/ಕರಿಹಲಗೆಯಲ್ಲಿ ಬರೆಯುವುದು. (IT ಸಾಧ್ಯತೆ slide show)

ಮಕ್ಕಳು ಗುಂಪಿನಲ್ಲಿ ಕುಳಿತು ಹೇಳಿಕೆಗಳನ್ನು ಓದಿ ಸರಿ–ತಪ್ಪು ಬರೆಯಲಿ. ಆಶಯವನ್ನು ಸರಿಯಾಗಿ ಗುರುತಿಸಿದ ಗುಂಪನ್ನು ಅಭಿನಂದಿಸುವುದು ಆ ಬಳಿಕ ತಪ್ಪುಗಳನ್ನು ಸರಿಪಡಿಸಿ ಬರೆಯುವುದು.

**ಉದಾಹರಣೆ :**

1. ರೈಲಿನಲ್ಲಿ ಊಟ ತಿಂಡಿಗಳಿಗೆ ಕೊರತೆ ಇತ್ತು.
2. ಪೂನಾಕ್ಕೆ ತಲುಪಿದಾಗ ಬೆಳಗ್ಗಿನ ಜಾವ ಎರಡು ಗಂಟೆ.
3. ರಾಮನ್‌ಗೆ ಹಿಂದಿ ಬರುತ್ತಿರಲಿಲ್ಲ.
4. ಮೊದಲ ದಿನ ಪೂಕುಟ್ಟಿ ಮತ್ತು ರಾಮನ್ ಊಟಕ್ಕೆ ಹೊರಗೆ ಹೋದರು.
5. ಅವರೆಲ್ಲ ತಮ್ಮ ಬೆರಳುಗಳನ್ನು ಬಟ್ಟಲುಗಳಲ್ಲಿ ತೊಳೆಯುತ್ತಿದ್ದರು.
6 ಮಧ್ಯಾಹ್ನ ಊಟ ಮುಗಿಸಿ ಟೀ ಕುಡಿಯುತ್ತಿದ್ದಾಗ ಸಂದರ್ಶನಕ್ಕೆ ಕರೆ ಬಂತು.
7. ಸಂದರ್ಶನ ಎರಡೇ ನಿಮಿಷಗಳಲ್ಲಿ ಮುಗಿಯಿತು.
8. ಮೊತ್ತ ಮೊದಲ ಹೆಸರು ರಸೂಲ್ ಪೂಕುಟ್ಟಿ.

## ಉತ್ತರ ಬರೆಯುವ

ಮಕ್ಕಳು ಗುಂಪುಗಳಾಗಲಿ– ಆಶಯಗ್ರಹಣಕ್ಕಿರುವ ಪ್ರಶ್ನೆಗಳಿಗೆ ಉತ್ತರವನ್ನು ಬಾಯ್ದೆರೆಯಾಗಿ ಹೇಳಲಿ. ಮಕ್ಕಳು ಪರಸ್ಪರ ಮೌಲ್ಯಮಾಪನ ನಡೆಸಿ ತಪ್ಪಿದಲ್ಲಿ ಸರಿಪಡಿಸಿ ಬಳಿಕ ಬರೆಯಲಿ. ಬರೆದ ಉತ್ತರವನ್ನು ಗುಂಪುಗಳಲ್ಲಿ ಪರಸ್ಪರ ಬದಲಾಯಿಸಿ ಅಕ್ಷರ ತಪ್ಪುಗಳನ್ನು ಗುರುತಿಸಲಿ. ಅಧ್ಯಾಪಕರ ಸಹಾಯದಿಂದ ತಪ್ಪುಗಳನ್ನು ಸರಿಪಡಿಸಿ ಬರೆಯಲಿ.

## ದಿನಚರಿ ಬರೆಯುವ

ಮಕ್ಕಳು ತಮ್ಮ ಶಾಲಾ ದಿನದ ಅನುಭವಗಳನ್ನು ದಿನಚರಿ ರೂಪದಲ್ಲಿ ಬರೆಯಬೇಕು. ದಿನಚರಿ ಬರೆಯುವುದು ಹೇಗೆ?

ಆ ದಿನದ ಅನುಭವವನ್ನು ತನ್ನದೇ ಆದ ರೀತಿಯಲ್ಲಿ ಬರೆಯುವುದಲ್ಲವೇ? ಅನುಭವವು ವ್ಯಕ್ತಿಯನ್ನು ಅವಲಂಬಿಸಿ, ವ್ಯಕ್ತಿತ್ವವನ್ನು ಅವಲಂಬಿಸಿ ಬದಲಾಗುತ್ತದೆ. ದಿನಚರಿಯ ಬರಹ ಮಗುವಿನ ಸ್ವಂತಿಕೆಯಿಂದ ಕೂಡಿರಬೇಕು. ತನಗೆ ಇಷ್ಟವಾದ ಸಂದರ್ಭ ಸನ್ನಿವೇಶಗಳನ್ನು ಅನುಭವದಿಂದ ಬರೆಯುವಂತೆ ಮಗುವನ್ನು ಪ್ರೇರೇಪಿಸಬೇಕು. ಇದರಿಂದ ದಿನನಿತ್ಯದ ಚಟುವಟಿಕೆಗಳ ದೋಷಗಳನ್ನು ಕಂಡುಕೊಂಡು ಪರಿಹಾರವನ್ನು ರೂಪಿಸಲು ಮಗುವಿಗೆ ಸಾಧ್ಯವಾಗಬೇಕು. ಅದೇ ರೀತಿ ಗುಣಗಳನ್ನು ಗ್ರಹಿಸಿ ಮುಂದುವರಿಸಲು, ಅಳವಡಿಸಿಕೊಳ್ಳಲು ಸಾಧ್ಯವಾಗಬೇಕು. ಆದುದರಿಂದ ವ್ಯಕ್ತಿತ್ವ ನಿರ್ಮಾಣದಲ್ಲಿ ದಿನಚರಿ ಬರವಣಿಗೆಯು ಮಹತ್ವದ ಪಾತ್ರ ವಹಿಸುತ್ತದೆ.

## ದಿನಚರಿಯಲ್ಲಿ ಯಾವುದನ್ನೆಲ್ಲ ಬರೆಯಬೇಕು?

ದಿನಚರಿಯಲ್ಲಿ ಮಗುವು ತನ್ನ ಮನಸ್ಸಿಗೆ ಅನ್ನಿಸಿದ್ದನ್ನೆಲ್ಲಾ ಬರೆಯಬಹುದು. ಬರೆದ ವಿಚಾರಗಳನ್ನು ವೈಜ್ಞಾನಿಕವಾಗಿ ವಿಮರ್ಶಿಸಿ ಸೂಕ್ತ ಸಲಹೆಗಳನ್ನು ನೀಡಬೇಕು. ತೀರಾ ಖಾಸಗಿ ವಿಚಾರಗಳನ್ನು ತರಗತಿಯ ಎಲ್ಲರ ಸಮ್ಮುಖದಲ್ಲಿ ತಿಳಿಸುವುದು ಅಪೇಕ್ಷಣೀಯವಲ್ಲ. ಭಾಷಾ ಬೆಳವಣಿಗೆಯ ದೃಷ್ಟಿಯಿಂದ ಸ್ವತಂತ್ರವಾದ ವಾಕ್ಯರಚನಾ ಕೌಶಲವನ್ನು ಮಗುವು ತನ್ನಿಂದ ತಾನೇ ಕರಗತ ಮಾಡಿಕೊಳ್ಳುವ ಕಾರಣ ದಿನಚರಿ ಬರವಣಿಗೆ ಅತ್ಯಂತ ಯೋಗ್ಯ, ಸ್ವಂತಿಕೆ ಶೈಲಿಗಳು ಸುಲಭವಾಗಿ ಅಭ್ಯಾಸವಾಗುವುದು. ಮಾತ್ರವಲ್ಲ ಅಧ್ಯಾಪಕನಿಗೆ ಆಪ್ತ ಸಲಹೆಗಾರನಾಗಿ ಮಗುವಿನ ಕಲಿಕೆಯ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯ ಮಾಡಬಹುದು.

ಆರಂಭದ ಹಂತದಲ್ಲಿ ಮಗು ದಿನಚರಿಯನ್ನು ವರದಿಯ ರೂಪದಲ್ಲಿ ಬರೆಯುವ ಸಾಧ್ಯತೆಗಳಿವೆ. ಮುಂದುವರಿದಂತೆ ಅನುಭವಗಳನ್ನು ಒಳಗೊಳ್ಳಿಸಿ ವಿಶಿಷ್ಟ ಶೈಲಿಯಲ್ಲಿ ಬರೆಯಲು ಸೂಚನೆಗಳನ್ನು ನೀಡಬೇಕು. ಮುಂದಿನ ಹಂತದಲ್ಲಿ ದಿನದ ಸಂಪೂರ್ಣ ಕಾರ್ಯಚಟುವಟಿಕೆಗಳ ಬಗ್ಗೆ ಬರೆಯಬೇಕೆಂದಿಲ್ಲ. ತನಗೆ ಇಷ್ಟವಾದ ಅಥವಾ ಇಷ್ಟವಾಗದ ಕಾರ್ಯಗಳ ಕುರಿತು ಅನಿಸಿಕೆಗಳನ್ನು ಬರೆಯಬಹುದು. ತನ್ನ ಕನಸುಗಳ ಬಗ್ಗೆ, ತಾನು ಯೋಚಿಸುವ ವಿಚಾರಗಳ ಕುರಿತು ಬರೆಯಬಹುದು. ಆ ದಿನದ ಯಾವುದಾದರೂ ಘಟನೆಯನ್ನು ವಿಶ್ಲೇಷಿಸಿ ಬರೆದದ್ದಾಗಿರಬಹುದು. ತನ್ನ ಮನದ ನೋವನ್ನು ಅಕ್ಷರ ರೂಪದಲ್ಲಿ ಬರೆದಿರಬಹುದು.

–(ಕವಿತೆ, ಕಥೆ, ವಿಡಂಬನೆ,...)

ವೈವಿಧ್ಯಪೂರ್ಣವಾದ ದಿನಚರಿಯ ಮಾದರಿಗಳನ್ನು ಮಕ್ಕಳಿಗೆ ಒದಗಿಸುವುದು.

## ಅನುಭವ ಬರೆಯುವ

ವಿದ್ಯಾರ್ಥಿಗಳಿಂದ ಪ್ರಯಾಣದ ಅನುಭವವನ್ನು ತರಗತಿಯಲ್ಲಿ ಹೇಳಿಸುವುದು. ಅಧ್ಯಾಪಕರು ತಮ್ಮ ಪ್ರಯಾಣದ ಅನುಭವಗಳನ್ನು ಹೇಳುವುದು. ಪ್ರವಾಸಾನುಭವದ ಭಾಗಗಳನ್ನು ಚಾರ್ಟಿನಲ್ಲಿ ಬರೆದು ಪ್ರದರ್ಶಿಸುವುದು. (ITಸಂಚಾರಿ ಸಾಹಿತ್ಯ) ಆ ಬಳಿಕ ಮಕ್ಕಳು ವೈಯಕ್ತಿಕವಾಗಿ ತಾವು ನಡೆಸಿದ ಪ್ರಯಾಣದ ಅನುಭವವನ್ನು ಬರೆಯಲಿ. ತರಗತಿಯಲ್ಲಿ ಮಂಡಿಸಲಿ.

ಅನುಭವ ಕಥನ ಹೇಗಿರಬೇಕು?

- ಆಶಯಗಳು ಸ್ಪಷ್ಟವಾಗಿರಬೇಕು.
- ವಿಚಾರಗಳು ವಸ್ತುನಿಷ್ಠವಾಗಿಬೇಕು
- ವಾಕ್ಯರಚನೆಯ ನಿಯಮಗಳನ್ನು ಪಾಲಿಸಿರಬೇಕು
- ಸ್ಥಳ ವಿವರಣೆಗಳು ಇರಬೇಕು
- ಸ್ವಂತಿಕೆಯಿಂದ ಕೂಡಿರಬೇಕು
- ಆಕರ್ಷಣೀಯವಾದ ಶೈಲಿ ಇರಬೇಕು

ಅನುಭವಕಥನದ ಸೂಚಕಗಳನ್ನು ಮಕ್ಕಳಿಂದಲೇ ಹೇಳಿಸುವುದು ಉತ್ತಮ. ಸೂಚಕಗಳ ಆಧಾರದಲ್ಲಿ ಅನುಭವ ಕಥನವನ್ನು ಪರಿಷ್ಕರಿಸಿ ಬರೆಯಲಿ. ಅನುಭವಕಥನ, ಪ್ರವಾಸ ಕಥನ ಸಂಚಿಕೆ ತಯಾರಿಸಬಹುದಲ್ಲವೇ ?

**ತುಂಬಿಸುವ**

ಪಾಠ ಭಾಗದಲ್ಲಿ ಬಂದಿರುವ ವಿಶೇಷ ಪದ/ನುಡಿಗಟ್ಟುಗಳನ್ನು ಮಕ್ಕಳು ಸ್ವಾಯತ್ತ ಮಾಡಿಕೊಂಡು ವಾಕ್ಯ ರಚನೆಯಲ್ಲಿ ಸಂದರ್ಭೋಚಿತವಾಗಿ ಬಳಸಬೇಕಾಗಿದೆ. ಆ ಉದ್ದೇಶದಿಂದ ಕೆಲವು ಪದಗಳನ್ನು/ನುಡಿಗಟ್ಟುಗಳನ್ನು ಆವರಣದಲ್ಲಿ ನೀಡಲಾಗಿದೆ. ಸೂಕ್ತವಾದ ಪದದ ಸರಿಯಾದ ರೂಪವನ್ನು ಬಳಸಿಕೊಂಡು ಗದ್ಯಭಾಗವನ್ನು ಪೂರ್ತಿಗೊಳಿಸಲಿ.

1. ಚಳುವಳಿ. 2. ದುಃಖದ ಕಡಲಲ್ಲಿ ಮುಳುಗಿದನು. 3. ಗೋಳೋ ಎಂದು ಅಳತೊಡಗಿದನು. 4. ತನ್ನ ಕಣ್ಣನ್ನು ತಾನೇ ನಂಬಲಿಲ್ಲ. 5. ಸಾರ್ಥಕವಾಯಿತು.

**ಪದ ಬರೆಯುವ**

ಆರಂಭದ ಅಕ್ಷರಗಳನ್ನು ಬದಲಾಯಿಸಿ ಹೊಸ ಪದ ಬರೆಯುವುದು ಒಂದು ಭಾಷಾ ಆಟವಾಗಿದೆ. ಇದು ಮಕ್ಕಳ ಪದ ಸಂಪತ್ತನ್ನು ಬೆಳೆಸಲು ಸಹಕಾರಿಯಾಗುವುದು. ಅಧ್ಯಾಪಕರು ಇಂತಹ ಸಾಕಷ್ಟು ಉದಾಹರಣೆಗಳನ್ನು ನೀಡುವುದು.

1. ಸರಳ ವಿರಳ ಗರಳ ತರಳ ಹೇರಳ ಕೇರಳ ಕೊರಳ ನೆರಳ ಬೆರಳ ಮರಳ
2. \- - - - - - - - - - - - - - - - - - - - - - - - - - -

**ವಾಕ್ಯ ಬದಲಾಯಿಸಿ ಬರೆಯುವ**

ವಾಕ್ಯ ರಚನೆ ಉತ್ತಮಗೊಳ್ಳಬೇಕಾದರೆ ವ್ಯಾಕರಣಾಂಶಗಳು ಮನವರಿಕೆಯಾಗಬೇಕಾದ ಅಗತ್ಯವಿದೆ. ಇಲ್ಲಿ 'ಅವನು' ಎಂಬ ಸರ್ವನಾಮ ಪದವನ್ನು ಬಳಸಬೇಕಾಗಿದೆ. ಹಾಗೆ ಬಳಸುವಾಗ ವಾಕ್ಯದಲ್ಲಿ ಉಂಟಾಗುವ ಬದಲಾವಣೆಗಳು ಯಾವುವು? ಮಗು ಈ ವ್ಯತ್ಯಾಸವನ್ನು ಸ್ವತಃ ಕಂಡುಹಿಡಿಯಲಿ. ಆ ಬಳಿಕ ಸರ್ವನಾಮ ಪದ ಬಳಸಿ ವಾಕ್ಯವನ್ನು ಬದಲಾಯಿಸಿ ಬರೆಯಲಿ.

> ನಾಮಪದದ ಬದಲಾಗಿ ಉಪಯೋಗಿಸುವ ಪದವನ್ನು ಸರ್ವನಾಮ ಪದ ಎನ್ನುತ್ತೇವೆ.
> ಅವನು, ಅವಳು, ಇವನು, ಇವಳು, ಅವರು, ಅದು, ಇದು,... ಇತ್ಯಾದಿ ಪದಗಳು ಸರ್ವನಾಮಗಳಾಗಿವೆ.

ಇದೇ ರೀತಿಯಲ್ಲಿ ಇತರ ಸರ್ವನಾಮಗಳ ಬಳಸಿ ವಾಕ್ಯವನ್ನು ಬದಲಾಯಿಸಿ ಬರೆಯಲಿ. ಲಿಂಗ ಮತ್ತು ಕಾಲಕ್ಕನುಸರಿಸಿ ವಾಕ್ಯ ರಚನೆಯಲ್ಲಿ ಬದಲಾವಣೆ ಯಾಗುವುದನ್ನು ಮಕ್ಕಳು ಕಂಡು ಹಿಡಿಯಲಿ.

ಉದಾ:

| ಲಿಂಗ | ಕಾಲ |
| --- | --- |
| ನಾನು ಊಟಕ್ಕೆ ಹೋದೆನು. | ನಾನು ಊಟಕ್ಕೆ ಹೋಗುತ್ತೇನೆ/ಹೋಗುವೆನು. |
| ಅವನು ಊಟಕ್ಕೆ ಹೋದನು. | ಅವನು ಊಟಕ್ಕೆ ಹೋಗುತ್ತಾನೆ./ಹೋಗುವನು. |
| ಅವಳು ಊಟಕ್ಕೆ ಹೋದಳು. | ಅವಳು ಊಟಕ್ಕೆ ಹೋಗುತ್ತಾಳೆ/ಹೋಗುವಳು |
| ಅದು ಊಟಕ್ಕೆ ಹೋಯಿತು. | ಅದು ಊಟಕ್ಕೆ ಹೋಗುತ್ತದೆ/ಹೋಗುವುದು. |
| ಅವರು ಊಟಕ್ಕೆ ಹೋದರು. | |

ಪೂರಕ ಓದಿಗೆ

# ನಯಾಗರಾ ಎಂಬ ಅದ್ಭುತ

ಟೊರಾಂಟೋ ನಗರದ ಹತ್ತಿರವೇ ಇರುವ ನಯಾಗರಾ ಜಗತ್ತಿನ ಅತ್ಯಂತ ಜನಪ್ರಿಯ ಪ್ರವಾಸೀ ತಾಣಗಳಲ್ಲಿ ಒಂದು. ವರ್ಷಕ್ಕೆ ಸುಮಾರು 15 ಮಿಲಿಯ ಜನ ಇದನ್ನು ನೋಡಲು ಪ್ರಪಂಚದ ಮೂಲೆ ಮೂಲೆಗಳಿಂದ ಬರುತ್ತಾರೆ. ಅಮೇರಿಕಾ, ಕೆನಡಾ ನಡುವೆ ಹಂಚಿಹೋಗಿರುವ ನಯಾಗರಾ ಜಲಪಾತ, ಕೆನಡಾ ಕಡೆಯಿಂದ ಹೆಚ್ಚು ಸುಂದರ. ಕುದುರೆ ಲಾಳದ ಆಕಾರದಲ್ಲಿ ಭೋರ್ಗರೆಯುವ ಜಲಪಾತ ಎದೆ ಡವಗುಟ್ಟಿಸುತ್ತದೆ. ನಡುವೆ ಮೂಡುವ ಕಾಮನಬಿಲ್ಲು ಮೋಡಿ ಹಾಕುತ್ತದೆ.

ನಯಾಗರಾ ಜಲಪಾತ ವರ್ಷದುದ್ದಕೂ ಬೇರೆ ಬೇರೆ ರೀತಿಯ ಆಕರ್ಷಣೆಯೊಡ್ಡುತ್ತದೆ. ಬೇಸಿಗೆಯಲ್ಲಿ ಭೋರ್ಗರೆಯುವ ನಯಾಗರಾ, ಚಳಿಗಾಲದಲ್ಲಿ ಅಂಚುಗಳೆಲ್ಲಾ ಹಿಮಗಡ್ಡೆಯಾದಾಗ, ವಿಚಿತ್ರವಾಗಿ, ಹರಿಯುತ್ತಾ ಇದೆಯೋ ಇಲ್ಲವೋ ಎಂಬ ಅನುಮಾನ ಹುಟ್ಟಿಸುತ್ತದೆ. ಚಳಿಗಾಲದಲ್ಲಿ ಎಷ್ಟು ಕೊರೆತವಿದ್ದರೂ, ಈ ಜಲಪಾತ ಪೂರ್ತಿ ಹೆಪ್ಪುಗಟ್ಟಿದ್ದು 1848ರಲ್ಲಿ ಒಂದೇ ಬಾರಿಯಂತೆ. ಅದನ್ನು ನೋಡಿ ಅವಾಕ್ಕಾದ ಜನ, ಪ್ರಪಂಚದ ಅಂತ್ಯ ಸಮೀಪಿಸಿದೆ ಎಂದು ಅಂದುಕೊಂಡರಂತೆ. ಈಗ ನಯಾಗರಾ ಹೊಸದಾಗಿ ಮದುವೆಯಾಗಿ ಮಧುಚಂದ್ರಕ್ಕೆ ಬರುವವರಿಗೆ ಅಚ್ಚುಮೆಚ್ಚಿನ ತಾಣ. ಇಲ್ಲಿನ ಹೋಟೆಲ್‌ಗಳೆಲ್ಲಾ ವಿಪರೀತ ದುಬಾರಿ. ದೋಣಿಯೊಂದರಲ್ಲಿ ಕೂತು ಜಲಪಾತದ ಸಮಾಪಕ್ಕೆ ಕರೆದೊಯ್ಯುವ 'ಮೇಡ್ ಆಫ್ ದಿ ಮಿಸ್ಟ್' ವಿಹಾರವನ್ನು ಬಣ್ಣಿಸುವುದು ಅಸಾಧ್ಯ. ಅಂಥಾ ರೋಮಾಂಚಕ ಅನುಭವ.

ಕೆಲವರಿಗೆ ನಯಾಗರಾ ಒಂದು 'ಕಪ್ಪು' ಆಕರ್ಷಣೆಯನ್ನು ಒಡ್ಡಿದೆ. ಹೀಗಾಗಿ ಪೀಪಾಯಿಗಳಲ್ಲಿ ಬಂದ್ ಮಾಡಿಕೊಂಡು ಜಲಪಾತದ ಮೇಲಿಂದ ಧುಮುಕುವವರು, ದೋಣಿಗಳಲ್ಲಿ ಜಲಪಾತದ ಮೇಲೆ ಹುಟ್ಟು ಹಾಕಲು ಹೋದವರು, ಇಂಥವರ ಕತೆಗಳು ಸಾಕಷ್ಟಿವೆ. ಇದರಲ್ಲಿ ಕೆಲವರು ಬದುಕುಳಿದಿದ್ದಾರೆ. ಇಂಥಾ ಪ್ರಸಂಗಗಳನ್ನು ತಡೆಯಲು ಸರ್ಕಾರ ಸಾಕಷ್ಟು ಕಾಯಿದೆಗಳನ್ನು ಮಾಡಿದೆ.

ನಯಾಗರಾ ಆಕರ್ಷಣೆ ಭಾರತೀಯರಿಗಂತೂ ವಿಪರೀತ. ತಂದೆ ತಾಯಿ ಊರಿಗೆ ಬಂದಾಗ ಮೊದಲು ಮಕ್ಕಳು ಅವರಿಗೆ ತೋರಿಸುವುದು ನಯಾಗರಾ. ಹೀಗಾಗಿ ಅಲ್ಲಿ ಹೋದಾಗ ಕಂಡು ಬರುವ 'ದೇಸೀ' ಗುಂಪುಗಳು, 'ದೇಸೀ' ಹೋಟೆಲ್‌ಗಳು ಅಪಾರ!

# ಕಂಗಾಲು ಮಾಡಿದ ಕೇರೆ ಹಾವು!

ವನ್ಯಜೀವಿ ಪಶುವೈದ್ಯ ಯಾವಾಗಲೂ ಉದ್ವೇಗ, ಆತಂಕ, ಪ್ರಾಣಭಯಗಳ ಮಧ್ಯೆಯೇ ಕೆಲಸ ನಿರ್ವಹಿಸಬೇಕಾಗುತ್ತದೆ. ಕೆಲವೊಮ್ಮೆ ಅನಿರೀಕ್ಷಿತವಾಗಿ ತಮಾಷೆಯ ಪ್ರಸಂಗಗಳು ಎದುರಾಗುತ್ತವೆ. ಬೆಟ್ಟದಂತೆ

ಬಂದ ಸಮಸ್ಯೆ ಮಂಜಿನಂತೆ ಕರಗಿಹೋಗುವ ಪ್ರಸಂಗಗಳು ಇಲ್ಲದಿಲ್ಲ. ಅನೇಕ ಸಂದರ್ಭಗಳಲ್ಲಿ ನಿಸ್ಸಹಾಯಕ, ನಿರುಪಾಯ ಪ್ರಾಣಿಗಳು ಗೊಂದಲ, ಗಾಬರಿ , ಭೀತಿಗಳನ್ನುಂಟುಮಾಡುತ್ತವೆ.

ಉತ್ತರ ಕನ್ನಡ ಜಿಲ್ಲೆ ಶಿರಸಿಯಲ್ಲಿರುವ ಮೃಗಾಲಯದ ಕಡವೆಗಳಲ್ಲಿ ಸಾಂಕ್ರಾಮಿಕ ರೋಗವೊಂದು ನನ್ನ ಶಿರಸಿ ಭೇಟಿಗೆ ಕಾರಣ ಆಯಿತು. ನಾನು ಶಿವಮೊಗ್ಗದಿಂದ ಶಿರಸಿಗೆ ಪ್ರಯಾಣ ಹೊರಟ ಸಮಯಕ್ಕೆ ಸರಿಯಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ವನ್ಯಜೀವಿ ಪಶುವೈದ್ಯ ಅಧಿಕಾರಿ ಡಾ। ಬಸವರಾಜಪ್ಪನವರು ಸ್ವಂತ ಕೆಲಸದ ನಿಮಿತ್ತ ಶಿವಮೊಗ್ಗಕ್ಕೆ ಆಗಮಿಸಿದರು.

ನನ್ನ ಕೋರಿಕೆಯ ಮೇರೆಗೆ ಅವರೂ ಶಿರಸಿಗೆ ಹೊರಟರು. ಶಿರಸಿ ಅರಣ್ಯ ವಿಭಾಗದವರು ವಾಹನವನ್ನು ನಮ್ಮ ಪ್ರಯಾಣಕ್ಕೆ ಒದಗಿಸಿದ್ದರು. ನಾವಿಬ್ಬರೂ ಶಿರಸಿ ಮೃಗಾಲಯಕ್ಕೆ ಭೇಟಿ ನೀಡಿ ರೋಗ ತಪಾಸಣೆ ಮಾಡಿ ಸೂಕ್ತ ಚಿಕಿತ್ಸೆ ನೀಡಿ ಕೈಗೊಳ್ಳಬಹುದಾದ ಮುಂದಿನ ಕ್ರಮದ ಬಗ್ಗೆ ಚರ್ಚಿಸಿ ವಾಪಸು ತೆರಳಲು ಅನುವಾದೆವು. ವಲಯ ಅರಣ್ಯಾಧಿಕಾರಿಗಳನ್ನು, ಮೃಗಾಲಯದ ಪರಿವೀಕ್ಷಣೆಗೆ ಒಂದು ಸುತ್ತು ನಮ್ಮನ್ನು ಕರೆದೊಯ್ದರು. ಹಾವಿನ ಗುಂಡಿ ಒಳಗೆ ಇಣುಕಿ ನೋಡಿದರೆ ಲೆಕ್ಕವಿಲ್ಲದಷ್ಟು ಕೇರೆಹಾವು, ನಾಗರಹಾವುಗಳನ್ನು ಬಿಟ್ಟಿದ್ದಾರೆ. ಕೂಡಲೇ ಶಿವಮೊಗ್ಗ ಮೃಗಾಲಯದಲ್ಲಿ ಕಾಳಿಂಗ ಸರ್ಪಕ್ಕೆ ಸುಮಾರು ಒಂದು ತಿಂಗಳಿನಿಂದ ಕೇರೆ ಹಾವನ್ನು ಆಹಾರವಾಗಿ ಒದಗಿಸಲು ಸಾಧ್ಯವಾಗದೇ ಹೋದದ್ದು ನೆನಪಿಗೆ ಬಂದಿತು. ಮೃಗಾಲಯದ ಮೇಲ್ವಿಚಾರಕರಿಗೆ ಒಂದು ಕೇರೆಹಾವನ್ನು ಚೀಲದಲ್ಲಿ ತುಂಬಿ ಜೀಪಿನಲ್ಲಿಡಲು ಸೂಚಿಸಿದೆ. ಆತ ಕೇರೆ ಹಾವನ್ನು ಗೋಣಿಚೀಲದಲ್ಲಿ ಸೇರಿಸಿ ಬಿಗಿಯಲು ಸೂಕ್ತ ದಾರ ದೊರೆಯದೇ ತೆಂಗಿನ ಹುರಿಯಲ್ಲಿ ಕಟ್ಟಿ ನನ್ನ ಜೀಪಿಗೆ ರವಾನಿಸಿದ.

ಶಿರಸಿಯಿಂದ ಹೊರಟ ನಾವು ಸಿದ್ಧಾಪುರ ದಾಟಿ ತಾಳಗುಪ್ಪ ಸಮೀಪ ಬಂದಿದ್ದೆವು. ಡ್ರೈವರ್ ಮತ್ತು ಡಾ। ಬಸವರಾಜಪ್ಪನವರ ಮಧ್ಯೆ ನಾನು ಕುಳಿತಿದ್ದೆ. ಹರಟೆ ಹೊಡೆಯುತ್ತಾ ಪ್ರಯಾಣದ ಏಕತಾನತೆಯನ್ನು ಕಡಿಮೆ ಮಾಡುತ್ತಿದ್ದೆವು. ಚಾಲಕನ ಹಿಂಬದಿಯ ಒರಗು ಸೀಟಿಗೆ ನನ್ನ ಕೈಚಾಚಿ ಕುಳಿತಿದ್ದೆ. ಜೀಪ್ ವೇಗವಾಗಿ ಓಡುತ್ತಿತ್ತು. ಇದ್ದಕ್ಕಿದ್ದಂತೆ ನನ್ನ ತೋಳಿಗೆ ತಣ್ಣನೆಯ ವಸ್ತುವೊಂದು ತಗುಲಿದಂತಾಯಿತು. ಹಿಂದಿರುಗಿ ನೋಡಿದರೆ ನಮ್ಮ ಸಹ ಪ್ರಯಾಣಿಕ ಕೇರೆಹಾವು ಚೀಲದ ಬಂಧನದಿಂದ ಬಿಡುಗಡೆಹೊಂದಿ ಒರಗು ಸೀಟಿನ ಮೇಲೆ ನಿಧಾನವಾಗಿ ಹತ್ತುತ್ತಿದೆ!!

ಹಾವಿನ ಸ್ಪರ್ಶಕ್ಕೆ ಭೀತಿಯನ್ನುಂಟುಮಾಡುವ ವಿಚಿತ್ರ ಗುಣವಿದೆ. ನುಣುಪಾದ ತಣ್ಣನೆಯ ದೇಹ ಸದ್ದಿಲ್ಲದೆ ನನ್ನ ತೋಳಿನ ಮೇಲೆ ಹರಿಯುತ್ತ ಸಾಗಿದ ಕಲ್ಪನೆಯನ್ನು ವಾಚಕ ಮಹಾಶಯರು ಮಾಡಿಕೊಂಡರೆ ಇಡೀ ಪ್ರಸಂಗದ ಭೀತಿಪೂರ್ಣ ಅನುಭವ ಅರಿವಿಗೆ ಬರಬಹುದು. ವಿಷವಿಲ್ಲದ ಹಾವಾದರೂ ಅದರ ಸ್ಪರ್ಶ ಮೈಯಲ್ಲಿ ಮುಳ್ಳೇಳಿಸುತ್ತದೆ. ಬಾಲ್ಯದಿಂದಲೂ ಹಾವಿನ ಬಗ್ಗೆ ಮನಸ್ಸಿನಲ್ಲಿ ಅಚ್ಚೊತ್ತಿದ್ದ ಭೀತಿ ಪೂರ್ವಾಪರ ಯೋಚನೆಗೆ ಅವಕಾಶ ಕೊಡದೆ ಇದ್ದಕ್ಕಿದ್ದಂತೆ ಗಾಬರಿ ಹುಟ್ಟಿಸುತ್ತದೆ. ಕೇರೆಹಾವುಗಳಿಂದ ಉಪದ್ರವ ಇಲ್ಲವೆಂದು ತಿಳಿದಿದ್ದರೂ ಸುಪ್ತಪ್ರಜ್ಞೆಯಲ್ಲಿನ ಭೀತಿ ಅನೈಚ್ಛಿಕವಾಗಿ ನನ್ನ ಕೈ ಕೊಡವಿ ಹಾವು ಎಂದು ಕೂಗಲು ಪ್ರೇರೇಪಿಸಿತು.

ನನ್ನ ಗಾಬರಿಗೊಂಡ ಕೂಗಿಗೆ ಹಾವಿನ ಬಗ್ಗೆ ಅತೀವ ಭಯವಿದ್ದ ಚಾಲಕನ ಜಂಘಾಬಲವೇ ಉಡುಗಿ ಹೋಯಿತು. ವೇಗವಾಗಿ ಚಲಿಸುತ್ತಿದ್ದ ಜೀಪಿನ ಸ್ಟಿಯರಿಂಗ್ ವೀಲನ್ನು ಬಿಟ್ಟು ಎರಡು ಕೈ ಮತ್ತು ಕಾಲುಗಳನ್ನು ಮೇಲೆತ್ತಿ ಉದ್ರೇಕದಿಂದ 'ಎಲ್ಲಿ ಸಾರ್ ಎಲ್ಲಿ?' ಎಂದು ಕೂಗಿದ.

ನಿಯಂತ್ರಣ ತಪ್ಪಿದ ಜೀಪ್ ಬಲಗಡೆಗೆ ತಿರುಗಿ ಯದ್ವಾತದ್ವಾ ಓಡಲು ಆರಂಭಿಸಿತು. ಪುಣ್ಯಕ್ಕೆ ರಸ್ತೆ ನಿರ್ಜನವಾಗಿದ್ದು, ಎದುರಿನಿಂದಾಗಲಿ, ಹಿಂದಿನಿಂದಾಗಲಿ ವಾಹನಗಳು ಬರುತ್ತಿರಲಿಲ್ಲ. ಘಟ್ಟ ಪ್ರದೇಶವಾಗಿದ್ದಲ್ಲಿ ಪ್ರಪಾತದಲ್ಲಿ ನಮ್ಮ ಮತ್ತು ಜೀಪಿನ ಸುಟ್ಟ ಆವಶೇಷಗಳಿಗಾಗಿ ಹುಡುಕಾಡಬೇಕಾಗಿತ್ತು. ಇಲ್ಲವೇ ಬೆಟ್ಟದ ಬುಡವೊಂದಕ್ಕೆ ಅಪ್ಪಳಿಸಿದ ನಮ್ಮ ಜೀಪನ್ನು ದಾರಿಹೋಕರು ನೋಡಿ ಸುದ್ದಿ ಕಳಿಸಬೇಕಾಗುತ್ತಿತ್ತು. ಸುದೈವಕ್ಕೆ ಸಿದ್ಧಾಪುರದಿಂದ ತಾಳಗುಪ್ಪ ಮಾರ್ಗ ಘಟ್ಟದ ಮೇಲಿದ್ದರೂ ವಿಶಾಲವಾದ ಬಯಲಿನ ಮೂಲಕ ಸಾಗುತ್ತದೆ. ಚಾಲಕನ ಪಕ್ಕದಲ್ಲಿದ್ದ ನಾನು ಕ್ಲಚ್ ಮತ್ತು ಬ್ರೇಕ್ ಪೆಡಲ್‌ಗಳ ಮೇಲೆ ಪಾದ ಊರಿ ಜೀಪನ್ನು ನಿಯಂತ್ರಿಸಲು ಪ್ರಯತ್ನಿಸಿದೆ. ಮರಾಮತ್ ಇಲಾಖೆಯವರು ರಸ್ತೆಬದಿ ನೀರು ಹರಿಯಲು ನಿರ್ಮಿಸಿದ ಕಾಲುವೆಯೊಳಗೆ ಜೀಪಿನ ಎರಡು ಗಾಲಿಗಳು ಪ್ರವೇಶಿಸಿ ತಂತಾನೇ ಜೀಪ್ ನಿಂತುಕೊಂಡಿತು.

ಇಡೀ ಪ್ರಸಂಗ ಗಾಬರಿ ಹುಟ್ಟಿಸಿದರೂ, ನಂತರ ನಾವು ಮೂರು ಜನರಿಗೆ ಬಿದ್ದುಬಿದ್ದು ನಗುವಷ್ಟು ಹಾಸ್ಯ ದೊರಕಿತು. ಕೂಡಲೇ ಕೆಳಗಿಳಿದ ನಾನು ಮತ್ತು ಡಾ।ಬಸವರಾಜಪ್ಪ ಹಾವನ್ನು ನಿಯಂತ್ರಿಸಿ ಬಂಧಿಸುವ ಸಲುವಾಗಿ ಕವೆ ಕೋಲುಗಳಿಗಾಗಿ ಹುಡುಕಾಡಿದೆವು. ಕೆಳಗಿಳಿದ ಚಾಲಕ ಹಾವನ್ನು ಮತ್ತೆ ಜೀಪಿನಲ್ಲಿ ಹಾಕಿದರೆ ಶತಾಯಗತಾಯ ತಾನು ಡ್ರೈವ್ ಮಾಡುವುದಿಲ್ಲವೆಂದು ಹಟ ಹಿಡಿದ. ಆತನ ಕಡೆಗೆ ಗಮನವೀಯದೆ ಕವೆಗೋಲು ಹಿಡಿದ ನಾವಿಬ್ಬರೂ ಜೀಪನ್ನೆಲ್ಲಾ ಜಾಲಾಡಿದಲರೂ ಹಾವಿನ ಪತ್ತೆ ಇಲ್ಲ!

ಹಾವನ್ನು ಹೊರಗೆ ಹಾಕಿದ್ದನ್ನು ಕಣ್ಣಿನಿಂದ ನೋಡದೇ ಚಾಲಕ ಜೀಪನ್ನೇರಲು ಒಪ್ಪಲಿಲ್ಲ. ನಾವು ಹುಡುಕಾಡಿದರೂ ಹಾವು ಕಣ್ಣಿಗೆ ಬೀಳುತ್ತಿಲ್ಲ. ಬಾಗಿಲು ತೆಗೆದಾಗ ಹಾವು ಹೊರಗೆ ಹೋಗಿರಬಹುದೆಂದು ಮತ್ತು ಅದರಿಂದ ಇನ್ನಾವ ತೊಂದರೆಯಿಲ್ಲವೆಂದು ಚಾಲಕನನ್ನು ಒಪ್ಪಿಸಲು ಕಲಿತ ಬುದ್ಧಿಯನ್ನೆಲ್ಲಾ ಉಪಯೋಗಿಸಬೇಕಾಯಿತು. ಅಂತೂ ಚಾಲಕ ಅರ್ಧಮನಸ್ಸಿನಿಂದ ಜೀಪನ್ನೇರಿ ಗಾಡಿ ಓಡಿಸಿದ.

ಮೊದಲಿನ ವೇಗ, ಉತ್ಸಾಹ ಒಂದೂ ಇಲ್ಲ. ಚಲ್ತಿಕಾ ನಾಮ್ ಗಾಡಿ ಹಾಗೆ ನಮ್ಮ ಜೀಪ್ ಸಾಗುತ್ತಿದೆ. ತಾಳಗುಪ್ಪ ಒಂದು ಫರ್ಲಾಂಗ್ ದೂರವಿರಬಹುದು. ಕೆರೆ ಏರಿಯ ಮೇಲೆ ಜೀಪ್ ನಿಧಾನವಾಗಿ ಚಲಿಸುತ್ತಿದೆ. ಎಲ್ಲಿದ್ದನೋ ಏನೋ ಭುಜಂಗಪ್ಪ ನನ್ನ ಕಾಲಬಳಿ ಪ್ರತ್ಯಕ್ಷನಾದ. ಡಾ।ಬಸವರಾಜಪ್ಪನವರ ಸಹಾಯದಿಂದ ಕೇರೆಹಾವನ್ನು ಚೀಲದೊಳಗೆ ಸೇರಿಸಿ ಭದ್ರವಾಗಿ ಚೀಲವನ್ನು ಮುದುರಿ ಹಿಡಿದು ಚಾಲಕನಿಗೆ ಗಾಡಿ ಮುಂದೆ ಚಲಿಸಲು ತಿಳಿಸಿದೆ.

ಈ ಪ್ರಸಂಗ ಅವನ ಮನಸ್ಸು ಮತ್ತು ಬುದ್ಧಿಯನ್ನು ನಿಶ್ಚೇಷ್ಟಿತಗೊಳಿಸಿ ಬೆಪ್ಪನನ್ನಾಗಿ ಮಾಡಿತ್ತು. ಯಾವುದೇ ಸಮಜಾಯಿಷಿಗೆ ಒಪ್ಪದೇಹೋದ. ಕೊನೆಗೆ ತಾಳಗುಪ್ಪಕ್ಕೆ ಹೋಗಿ ಸೆಣಬಿನ ಹುರಿ ತಂದು ಭದ್ರವಾಗಿ ಚೀಲದ ಬಾಯಿ ಕಟ್ಟಿ ಮುಂದೆ ಪ್ರಯಾಣಿಸೋಣ ಎಂದು ಡಾ।ಬಸವರಾಜಪ್ಪ ಖಾಜಿ ನ್ಯಾಯ ಮಾಡಿದರು.

ರಾತ್ರಿ 8ಕ್ಕೆ ಶಿವಮೊಗ್ಗ ತಲುಪಿದ ನಂತರ ಅರೆಜೀವವಾಗಿದ್ದ ಕೇರೆಹಾವನ್ನು ಕಾಳಿಂಗ ಸರ್ಪದ ಗೂಡಿನಲ್ಲಿ ಎಸೆದ ಕೂಡಲೇ ಕರಿಯ ಕಾಳಿಂಗ ಸರ್ಪ ಗಪ್ಪನೇ ಭುಜಂಗರಾಯನ ತಲೆ ಹಿಡಿದು ನಿಧಾನವಾಗಿ ನುಂಗುತ್ತಾ ಅನೇಕ ದಿನಗಳ ತನ್ನ ಕ್ಷುದ್ಬಾಧೆಯನ್ನು ನೀಗಿಸಿಕೊಂಡಿತು.

## ಸಿಂಹದ ಸಂತಾನಾಭಿವೃದ್ಧಿ

ಶಿವಮೊಗ್ಗ – ಸಾಗರ ರಸ್ತೆಯಲ್ಲಿ ಶಿವಮೊಗ್ಗದಿಂದ ಒಂಬತ್ತು ಕಿ.ಮೀ. ದೂರದಲ್ಲಿ ಅರಣ್ಯ ಇಲಾಖೆ ನಿರ್ಮಿಸಿರುವ ತ್ಯಾವರೆಕೊಪ್ಪ ಹುಲಿ, ಸಿಂಹ ಧಾಮವಿದೆ. ಇಲ್ಲಿ ಜೂನಾಗಡ್ ಮೃಗಾಲಯದಿಂದ ತಂದ ಶುದ್ಧ ಏಷ್ಯಾ ತಳಿಯ ಸಿಂಹಗಳನ್ನು ಸಾಕಲಾಗುತ್ತಿದೆ. ಏಷ್ಯಾ ಸಿಂಹವು ಆಫ್ರಿಕ ಸಿಂಹದ ಒಂದು ಪ್ರಭೇದವಾಗಿದ್ದು, ಪರ್ಷಿಯಾ ದೇಶವು ಅದರ ಮೂಲಸ್ಥಾನವಾಗಿದೆ. ಪರ್ಷಿಯಾದಿಂದ ಆಫ್ಘಾನಿಸ್ತಾನದ ಮೂಲಕ ಕಾಬೂಲ್ ಕಣಿವೆ ಹಾದು ಭಾರತ ಪ್ರವೇಶಿಸಿದ ಈ ಜಾತಿಯ ಸಿಂಹಗಳು 'ಗಿರ್' ಅರಣ್ಯ, ರಾಜಸ್ತಾನ, ಮಧ್ಯಪ್ರದೇಶ, ಒರಿಸ್ಸಾಗಳ ತನಕ ವ್ಯಾಪಿಸಿದ್ದವಾದರೂ ಕಾಲಕ್ರಮೇಣ ಅಲ್ಪಸಂಖ್ಯಾತವಾಗಿ ಈಗ ಗಿರ್ ಅರಣ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದೆ.

ಈ ವನ್ಯಪ್ರಾಣಿಯನ್ನು ಅಳಿವಿನ ಅಂಚಿನಲ್ಲಿರುವ ಪ್ರಾಣಿ ಎಂದು ಘೋಷಿಸಲಾಗಿದೆ. ಪ್ರಾಕೃತಿಕ ಪರಿಸರ ಮತ್ತು ಮೃಗಾಲಯಗಳಲ್ಲಿರುವ ಈ ಜಾತಿಯ ಸಿಂಹಗಳ ಸಂಖ್ಯೆಯನ್ನು ಗಮನಕ್ಕೆ ತೆಗೆದುಕೊಂಡರೆ ಇವುಗಳ ಒಟ್ಟು ಸಂಖ್ಯೆ ಈಗ 1200 ರಿಂದ 2000ದವರೆಗೆ ಮಾತ್ರ ಇರಬಹುದು. ಈ ಪ್ರಾಣಿಯು ತನ್ನ ಉಳಿವಿಗಾಗಿ ತೀವ್ರ ಸಂಕಷ್ಟವನ್ನು ಎದುರಿಸುತ್ತಿದೆ. ಬಣ್ಣದಲ್ಲಿ ಕೇಸರದ ಹರಡುವಿಕೆಯಲ್ಲಿ, ಮೊಣಕೈ ಮೇಲೆ ಇರುವ ಕೂದಲುಗಳ ಗುಚ್ಛದಲ್ಲಿ ಈ ಸಿಂಹ ಆಫ್ರಿಕದ ಸಿಂಹಕ್ಕಿಂತ ತುಸು ವ್ಯತ್ಯಾಸವನ್ನು ಹೊಂದಿದೆ. ತೀರ ಹತ್ತಿರದ ಸಂಬಂಧಿಗಳ ಸಂಪರ್ಕದಿಂದ ಸಂತಾನಾಭಿವೃದ್ಧಿಯನ್ನು ಮಾಡುವ ಈ ಸಿಂಹ, ಪರಿಸರದ ಮೇಲಿನ ಮನುಷ್ಯನ ಆಕ್ರಮಣದ ಕಾರಣವಾಗಿ, ತನ್ನ ಆಹಾರಕ್ಕಾಗಿ ಪರದಾಡಬೇಕಾದ ಸ್ಥಿತಿಯಲ್ಲಿ ಬದುಕಿದೆ. ಆಹಾರದ ಕೊರತೆಯಿಂದಾಗಿ ಸಂತಾನಾಭಿವೃದ್ಧಿಯ ಬಗ್ಗೆ ವಿಚಿತ್ರ ನಿಲುವನ್ನು ಹೊಂದಿರುವ ಆ ಪ್ರಾಣಿ, ತನಗೆ ಜನಿಸಿದ ಮರಿಗಳನ್ನು ತಾನೇ ಕೊಲ್ಲುವ ಸ್ವಭಾವ ವೈಪರೀತ್ಯವನ್ನು ಹೊಂದಿದೆ. ಸಂತಾನಾಭಿವೃದ್ಧಿಯು ಹೆಚ್ಚು ನಿಷ್ಫಲವಾಗಿರುವುದರಿಂದ ಮತ್ತು ಜನಿಸಿದ ಮರಿಗಳನ್ನು ಕೂಡಲೇ ತಿನ್ನುವ ಹವ್ಯಾಸದಿಂದಾಗಿ ಮೃಗಾಲಯಗಳಲ್ಲಿ ಸಿಂಹದ ಮರಿಗಳನ್ನು ತಾಯಿಯಿಂದ ಬೇರ್ಪಡಿಸಿ ಬಾಟಲಿ ಹಾಲು ನೀಡಿ ಸಾಕುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಆದರೂ ಅನೇಕ ಮೃಗಾಲಯಗಳಲ್ಲಿ ಸಿಂಹದ ಸಂತಾನಾಭಿವೃದ್ಧಿಯ ಪರಿಸ್ಥಿತಿ ಮತ್ತು ಮರಿಗಳು ಬದುಕಿ ಉಳಿಯುವ ಸಾಧ್ಯತೆಯು ಆಶಾದಾಯಕವಾಗಿಲ್ಲ.

# ಜೈ ಜವಾನ್

ದೇಶದ ರಕ್ಷಣೆ ನಮ್ಮ ಹೊಣೆ. ದೇಶಕ್ಕಾಗಿ ಅದೆಷ್ಟೋ ಮಂದಿ ಪ್ರಾಣ ತೆತ್ತು ಅಮರರಾದ ಕತೆಯನ್ನು ನಾವು ಕೇಳಿರುವೆವು. ಅದರಲ್ಲಿಯೂ ದೇಶದ ಸಂರಕ್ಷಣೆಯ ಜವಾಬ್ದಾರಿಯನ್ನು ಹೊತ್ತಂತಹ ನಮ್ಮ ವೀರ ಸೈನಿಕರು ನಿಜವಾಗಿಯೂ ಪ್ರಶಂಸಾರ್ಹರು. ಇತ್ತೀಚೆಗೆ ಉತ್ತರ ಭಾರತದಲ್ಲಿ ನಡೆದ ಭೀಕರವಾದ ನೆರೆಹಾವಳಿಯ ಸಂದರ್ಭದಲ್ಲಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟು ನಮ್ಮ ವೀರ ಸೈನಿಕರು ನಡೆಸಿದ ನೆರೆ ಪರಿಹಾರ ಕಾರ್ಯಾಚರಣೆಯು ಅವಿಸ್ಮರಣೀಯವಾದುದು. ಇಂತಹ ಘಟನೆಗಳನ್ನು ತಿಳಿಸುವ ಮೂಲಕ ನಮ್ಮ ಮಕ್ಕಳಲ್ಲಿಯೂ ದೇಶಪ್ರೇಮವನ್ನು ಉದ್ದೀಪನಗೊಳಿಸುವ ಸತ್ಕಾರ್ಯವನ್ನು ಕೈಗೊಳ್ಳೋಣ.

## ಪಾಠ ಪ್ರವೇಶ

- ದೇಶಕ್ಕಾಗಿ ಹೋರಾಡಿ ಅಮರರಾದ ಮಹಾಪುರುಷರ ಚಿತ್ರಗಳನ್ನು ತೋರಿಸುವುದು.
- ಅವರ ಬಗ್ಗೆ ಪ್ರಶ್ನೆಗಳನ್ನು ಕೇಳುವುದು.
- ಈ ಚಿತ್ರದಲ್ಲಿರುವವರು ಯಾರು?
-

ಇಂತಹ ಪ್ರಶ್ನೆಗಳ ಮೂಲಕ ಮಕ್ಕಳೊಂದಿಗೆ ಅಧ್ಯಾಪಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದು. ಇದೇ ರೀತಿ ಮಹಾಪುರುಷರ/ವೀರ ವನಿತೆಯರ ಬಗ್ಗೆ ತಿಳಿಸುತ್ತಾ ಪಾಠ ಪ್ರಾರಂಭಿಸಬಹುದು.

## ಚಟುವಟಿಕೆಗಳು

### ಓದುವ

ಮಕ್ಕಳು ಒಬ್ಬರನಂತರ ಒಬ್ಬರಂತೆ ಬಾಯ್ದೆರೆಯಾಗಿ ಪಠ್ಯ ಭಾಗವನ್ನು ಓದಲಿ.

### ಅಧ್ಯಾಪಕರ ಓದು

ಅಧ್ಯಾಪಕರು ಸ್ವರಭಾರಯುಕ್ತವಾಗಿ,ಸ್ಪಷ್ಟ ಉಚ್ಚಾರದೊಂದಿಗೆ, ಭಾವಪೂರ್ಣವಾಗಿ ಓದುವುದು.

ಮಕ್ಕಳು ಗುಂಪಿನಲ್ಲಿ ಕುಳಿತು ಹೊಸ ಪದಗಳನ್ನು ಕಂಡು ಹಿಡಿದು ಅರ್ಥಕೋಶದ ಸಹಾಯದಿಂದ ಆ ಪದಗಳ ಅರ್ಥವನ್ನು ಬರೆದು ಮಂಡಿಸಲಿ.

ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.

ಮಕ್ಕಳು ತಮಗೆ ಇಷ್ಟವಾದ ಭಾಗವನ್ನು ಪಾಠದಿಂದ ಆಯ್ಕೆ ಮಾಡಿ ನಿರರ್ಗಳವಾಗಿ, ಸ್ವರಭಾರಯುಕ್ತವಾಗಿ ಓದಲಿ. ಯಾಕೆ ಇಷ್ಟವಾಯಿತು? ಮಗು ಆಶಯವನ್ನು ಪೂರ್ಣ ವಾಕ್ಯದಲ್ಲಿ ಹೇಳಲಿ.

### ಉತ್ತರಿಸುವ

ಪಠ್ಯದಲ್ಲಿರುವ ಆಶಯ ಪೂರ್ಣ ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು. ಮಕ್ಕಳು ಉತ್ತರ ಹೇಳಲಿ. ಅನಂತರ ಬರೆದು ಮಂಡಿಸಲಿ.

ಅಧ್ಯಾಪಕರು ಉತ್ತರವನ್ನು ಕರಿಹಲಗೆಯಲ್ಲಿ ಬರೆಯುವುದು.

ಮಕ್ಕಳು ತಮ್ಮ ರಚನೆಯನ್ನು ಸರಿಪಡಿಸಿ ಬರೆಯಲಿ.

**ಚರ್ಚಿಸುವ**

ಆಪರೇಶನ್ ರಾಹತ್ ಪರಿಹಾರ ಕಾರ್ಯಾಚರಣೆಯ DVD ತೋರಿಸುವುದು, ಚರ್ಚಾ ಸೂಚಕ ಪ್ರಶ್ನೆಗಳನ್ನು ಕೇಳುವುದು.

- ನಿಮಗೆ ಇಷ್ಟವಾದ ಭಾಗ ಯಾವುದು?
- ಸೈನಿಕರ ಸಾಹಸದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚೆ ನಡೆಸುವುದು.

**ವಿವರಣೆ ಬರೆಯುವ**

- ತಾವು ವೀಕ್ಷಿಸಿದ ಹಾಗೂ ಓದಿ ಚರ್ಚಿಸಿದ ಆಪರೇಶನ್ ರಾಹತ್ ಪರಿಹಾರ ಕಾರ್ಯಾಚರಣೆಯ ಬಗ್ಗೆ ಪೂರ್ಣ ವಾಕ್ಯಗಳಲ್ಲಿ ವಿವರಣೆ ಬರೆಯಲಿ.
- ವ್ಯಕ್ತಿಗತ ವಿವರಣೆ ತಯಾರಿಸಲಿ. ಕೆಲವರು ಮಂಡಿಸಲಿ.
- ವಿವರಣೆ ಹೇಗಿರಬೇಕು?
- ಮಕ್ಕಳು ಸೂಚಕಗಳನ್ನು ಹೇಳಲಿ, ಅಧ್ಯಾಪಕರು ಬರೆಯುವುದು.
- ಎಲ್ಲಾ ವಿಷಯಗಳು ಒಳಗೊಂಡಿರಬೇಕು.
- ಅಕ್ಷರ, ಪದಗಳು ಸರಿಯಾಗಿರಬೇಕು.
- ವಾಕ್ಯಗಳು ಪೂರ್ಣ ರೂಪದಲ್ಲಿರಬೇಕು.
- ಅಧ್ಯಾಪಕರು ಕ್ರೋಡೀಕರಿಸಿ ಸೂಚಕಗಳನ್ನು ಬರೆಯುವುದು. ಮಕ್ಕಳು ಸೂಚಕದ ಆಧಾರದಲ್ಲಿ ವಿವರಣೆಯನ್ನು ಗುಂಪಿನಲ್ಲಿ ಸರಿಪಡಿಸಿ ಬರೆದು ಮಂಡಿಸಲಿ ಸೂಚಕಗಳಿಗೆ ಅನುಸರಿಸಿ ಪರಸ್ಪರ ಮೌಲ್ಯಮಾಪನ ನಡೆಯಲಿ.
- ಅಧ್ಯಾಪಕರು ವಿವರಣೆಯನ್ನು ಬರೆದು ತೋರಿಸುವುದು.
- ಮಕ್ಕಳು ಅಧ್ಯಾಪಕರ ಪ್ರತಿಯನ್ನು ನೋಡಿ ರಚನೆಯನ್ನು ಉತ್ತಮ ಪಡಿಸಲಿ.

***ಮೌಲ್ಯನಿರ್ಣಯ ಸೂಚಕಗಳು***

- ಆಶಯ ಸ್ಪಷ್ಟತೆ
- ಆಶಯ ಕ್ರಮೀಕರಣ
- ಭಾಷಾ ಶೈಲಿ

**ಭಿತ್ತಿ ಪತ್ರಿಕೆ ತಯಾರಿಸುವ**

- ಮಕ್ಕಳು ಭಾರತೀಯ ಸೈನಿಕರ ಯಶೋಗಾಥೆಯ ಪುಸ್ತಕಗಳನ್ನು ಸಂಗ್ರಹಿಸಲಿ
- ವೀರ ಸೈನಿಕರ ಸಾಹಸದ ಘಟನೆಗಳನ್ನೂ, ಅವರ ಚಿತ್ರಗಳನ್ನೂ ಸಂಗ್ರಹಿಸಿ ಸುಂದರವಾದ ಭಿತ್ತಿ ಪತ್ರಿಕೆ ತಯಾರಿಸಲಿ.
- ಭಿತ್ತಿ ಪತ್ರಿಕೆಯಲ್ಲಿ ಈ ಕೆಳಗಿನ ಅಂಶಗಳನ್ನು ಸೇರಿಸಬಹುದು.
  - ವೀರ ಸೇನಾನಿಗಳ ಭಾವಚಿತ್ರ
  - ವ್ಯಕ್ತಿ ಪರಿಚಯ
  - ಸಾಹಸದ ಕೆಲಸಗಳ ಪರಿಚಯ
  - ಆಲ್ಬಂ ಚಿತ್ರಗಳು ಇತ್ಯಾದಿ

- ಭಿತ್ತಿಪತ್ರಿಕೆಯು ಸುಂದರವಾಗಿಯೂ, ಆಕರ್ಷಕವಾಗಿಯೂ ಇರಬೇಕು.

**ಪುಸ್ತಕಗಳು**

1. ಕಾರ್ಗಿಲ್ ಕಾರ್ಯಾಚರಣೆ
2.
3.
4.

**ಸಂದರ್ಶನ ನಡೆಸುವ**

- ವೀರ ಜವಾನನೊಬ್ಬನನ್ನು ಸಂದರ್ಶಿಸಬೇಕಾಗಿದೆ.
- ಸಂದರ್ಶನದಲ್ಲಿ ಯಾವೆಲ್ಲ ಪ್ರಶ್ನೆಗಳನ್ನು ಕೇಳಬಹುದು?
- ಮಕ್ಕಳು ಕೆಲವು ಪ್ರಶ್ನೆಗಳನ್ನು ಹೇಳಲಿ.
- ಹಾಗಾದರೆ ಸಂದರ್ಶನಕ್ಕೆ ಬೇಕಾದ ಪ್ರಶ್ನೆಗಳನ್ನು ತಯಾರಿಸುವ.
- ವ್ಯಕ್ತಿಗತವಾಗಿ ಪ್ರಶ್ನೆಗಳನ್ನು ತಯಾರಿಸಲಿ
- ತಾವು ತಯಾರಿಸಿದ ಪ್ರಶ್ನೆಗಳನ್ನು ಮಂಡಿಸಲಿ.
- ಉಳಿದವರು ಸ್ವಮೌಲ್ಯಮಾಪನ ಮಾಡಲಿ
- ಅಧ್ಯಾಪಕರು ಪ್ರಶ್ನಾವಳಿ ಹೇಗಿರಬೇಕೆಂದು ಕೇಳುವುದು.

  ಮಕ್ಕಳು ಸೂಚಕಗಳನ್ನು ಹೇಳುವರು.

  - ವಿಷಯ ಪೂರ್ಣವಾಗಿರಬೇಕು
  - ಕ್ರಮಪ್ರಕಾರವಾಗಿರಬೇಕು
  - ಪದ, ಅಕ್ಷರ, ವಾಕ್ಯ ಸರಿಯಾಗಿರಬೇಕು.
- ಅಧ್ಯಾಪಕರು ಸೂಚಕಗಳನ್ನು ಕ್ರೋಡೀಕರಿಸಿ ಕರಿ ಹಲಗೆಯಲ್ಲಿ ಬರೆಯುವುದು.
- ಸೂಚಕದ ಆಧಾರದಲ್ಲಿ ಮಕ್ಕಳು ತಾವು ತಯಾರಿಸಿದ ಪ್ರಶ್ನೆಗಳನ್ನು ಗುಂಪಿನಲ್ಲಿ ಸರಿಪಡಿಸಿ ಮಂಡಿಸಲಿ.
- ಅಧ್ಯಾಪಕರು ಗುಂಪಿನ ಪ್ರಶ್ನಾವಳಿಯನ್ನು ಕ್ರೋಡೀಕರಿಸಿ ಕ್ರಮಾನುಗತವಾಗಿ ಕರಿಹಲಗೆಯಲ್ಲಿ ಬರೆಯುವುದು. ಅಗತ್ಯವಾದ
  ಪ್ರಶ್ನೆಗಳನ್ನು ಸೇರಿಸುವುದು.
- ಕ್ರೋಡೀಕರಿಸಿದ ಪ್ರಶ್ನೆಗಳನ್ನು ಗುಂಪುಗಳಲ್ಲಿ ಹಂಚುವುದು.
- ಸಂದರ್ಶನ ನೀಡುವವರನ್ನು ಸ್ವಾಗತಿಸಲು ಮತ್ತು ಅವರಿಗೆ ಧನ್ಯವಾದಗಳನ್ನು ಹೇಳಲು ಮಕ್ಕಳಿಗೆ ಜವಾಬ್ದಾರಿ ನೀಡುವುದು.
- ಮಕ್ಕಳು ಕ್ರಮಾನುಗತವಾಗಿ ಪ್ರಶ್ನೆಗಳನ್ನು ಕೇಳಲಿ. ಅವರ ಅನುಭವಗಳನ್ನು ದಾಖಲಿಸಿಕೊಳ್ಳಲಿ.
- ದಾಖಲಿಸಿದ ಅನುಭವಗಳನ್ನು ಆಧರಿಸಿ ಸಂದರ್ಶನ ವರದಿ ತಯಾರಿಸುವುದು ಉತ್ತಮವಲ್ಲವೇ?

***ಪ್ರಶ್ನಾವಳಿ ಹೀಗೂ ಇರಬಹುದು***

- ನೀವು ಎಷ್ಟು ವರ್ಷಗಳಿಂದ ಜವಾನರಾಗಿ ದೇಶಸೇವೆ ಮಾಡುತ್ತಿದ್ದೀರಿ?
- ದೇಶಸೇವೆ ಮಾಡಲು ನಿಮಗೆ ಸಿಕ್ಕಿದ ಪ್ರೇರಣೆಯೇನು?

- ಸೈನಿಕನಿಗೆ ಬೇಕಾದ ಅರ್ಹತೆಯೇನು?
- ಸೇನೆಗೆ ಜವಾನರನ್ನು ಹೇಗೆ ಆಯ್ಕೆಮಾಡುತ್ತಾರೆ?
- ಸೇನಾ ಜವಾನರಾಗಿ ನಿಮ್ಮ ಅನುಭವಗಳೇನು?
- ವೀರ ಜವಾನರಾಗಿ ನಿಮಗೆ ಪ್ರಶಸ್ತಿಗಳು ಬಂದಿವೆಯೇ ?
- ನಿಮ್ಮ ಮನೆಯವರು ನಿಮಗೆ ಪ್ರೋತ್ಸಾಹ ನೀಡುತ್ತಿದ್ದಾರೆಯೇ?
- ನಿಮ್ಮ ಕೆಲಸದಲ್ಲಿ ನಿಮಗೆ ಸಂತೃಪ್ತಿ ಇದೆಯೇ?
- ನೀವು ನಮಗೆ ಕೊಡುವ ಸಂದೇಶವೇನು?

## ಪತ್ರಿಕಾ ವರದಿ ಬರೆಯುವ

- ಅಧ್ಯಾಪಕರು ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಕೆಲವು ಪತ್ರಿಕಾ ತುಣುಕುಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು.
- ಕೆಲವು ಪ್ರಶ್ನೆಗಳೊಂದಿಗೆ ಚರ್ಚಿಸುವುದು.
- ಇದೇ ರೀತಿ ಮಕ್ಕಳು ಭೀಕರ ಮಳೆಯಿಂದುಂಟಾದ ಅನಾಹುತದ ಬಗ್ಗೆ ಊಹಿಸಿ ಪತ್ರಿಕೆಗೆ ವರದಿಯೊಂದನ್ನು ತಯಾರಿಸಲಿ
- ಮಕ್ಕಳು ವೈಯಕ್ತಿಕವಾಗಿ ಬರೆದ ವರದಿಯನ್ನು ಮಂಡಿಸಲಿ.
- ಪರಸ್ಪರ ಬದಲಾಯಿಸಿಕೊಂಡು ಮೌಲ್ಯಮಾಪನ ನಡೆಸಲಿ
- ಪತ್ರಿಕಾ ವರದಿಗೆ ಸಂಬಂಧಿಸಿದ ಸೂಚಕಗಳನ್ನು ಮಕ್ಕಳು ಹೇಳಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆದು ಕ್ರೋಡೀಕರಿಸುವುದು.

## *ಮೌಲ್ಯನಿರ್ಣಯ ಸೂಚಕಗಳು*

- ಆಶಯ ಸ್ಪಷ್ಟತೆ
- ಆಶಯ ಕ್ರಮೀಕರಣ
- ಉತ್ತಮ ಭಾಷಾ ಶೈಲಿ.
- ಸೂಚಕಗಳ ಆಧಾರದಲ್ಲಿ ಮಕ್ಕಳು ತಾವು ತಯಾರಿಸಿದ ಪತ್ರಿಕಾ ವರದಿಯನ್ನು ಗುಂಪಿನಲ್ಲಿ ಸರಿಪಡಿಸಿ ಮಂಡಿಸಲಿ.

  ಗುಂಪಿನಲ್ಲಿ ಮೌಲ್ಯ ಮಾಪನ ನಡೆಸಲಿ
- ಅಧ್ಯಾಪಕರು ಪತ್ರಿಕಾ ವರದಿಯನ್ನು ಕರಿಹಲಗೆಯಲ್ಲಿ ಬರೆಯುವುದು. ಅಧ್ಯಾಪಕರು ಬರೆದ ವರದಿಯನ್ನು ನೋಡಿ ಮಕ್ಕಳು ತಮ್ಮ ರಚನೆಯನ್ನು ಉತ್ತಮ ಪಡಿಸಲಿ.

## ಮೌಲ್ಯನಿರ್ಣಯ ಚಟುವಟಿಕೆಗಳು

1. ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಸಂಭಾಷಣೆಯ ರೂಪಕ್ಕೆ ಬದಲಾಯಿಸಿ ಬರೆಯಿರಿ.,

ಅಂದು ರವಿವಾರ, ಶಾಲೆಗೆ ಬಿಡುವಿತ್ತು ನಾವೆಲ್ಲ ಹೊಲದಲ್ಲಿ ಸೇರಿದೆವು. ಕಿಟ್ಟ, ಪುಟ್ಟ, ಸೋಮ, ಹುಸೇನ್ ಪಾರು ಎಲ್ಲರೂ ಇದ್ದರು. ಎಲ್ಲರೂ ಸೇರಿ ನಾಟಕ ಆಡಿದರೆ ಹೇಗೆ? ಕಿಟ್ಟು ಕೇಳಿದ. ಎಲ್ಲರೂ ಸರಿ, ಸರಿ, ಯಾವ ನಾಟಕ? ಎಂದರು. ಲಂಕಾದಹನ ಮಾಡೋಣ ಎಂದೆ ನಾನು. ಎಲ್ಲರೂ ಒಪ್ಪಿಕೊಂಡರು. "ನಾನು ರಾಮ" ಎಂದ ಕಿಟ್ಟ. ಪಾರು ಸೀತೆಯಾಗಲಿ ಸೋಮ ಹೇಳಿದ, ಪಾರು ನಾಚುತ್ತಲೇ

ಒಪ್ಪಿಕೊಂಡಳು. ನಾನೇ ಹನುಮಂತ ಎಂದು ಕಿರ್ರನೆ ಹಲ್ಲು ಕಿಸಿದು ನಾನು ಜಿಗಿದು ನಿಂತೆ. ಎಲ್ಲರೂ ನಕ್ಕರು.

ಹುಸೇನ ಊಟದ ತಟ್ಟೆಯನ್ನು ತೆಗೆದುಕೊಂಡ. “ಕೇಳಿರಿ’ ಕೇಳಿರಿ !! ಲಂಕಾದಹನ....... ನಾಟಕ ....... ಇದೀಗ ಪ್ರಾರಂಭವಾಗಲಿದೆ. ಬನ್ನಿರಿ, ನೋಡಿರಿ, ಆನಂದ ಪಡಿರಿ.....” ಎಂದು ಜೋರಾಗಿ ಕೂಗತೊಡಗಿದ. ಹೊಲದ ಆಸುಪಾಸಿನಲ್ಲಿ ಆಡುತ್ತಿದ್ದ ಇತರ ಮಕ್ಕಳೂ ಓಡಿ ಬಂದರು.

2. ಏರುತಿಹುದು ಹಾರುತಿಹುದು
ನೋಡು  ನಮ್ಮ ಬಾವುಟ
ತೋರುತಿಹುದು ಹೊಡೆದು ಹೊಡೆದು
ಬಾನಿನಗಲ ಪಟಪಟ
ಕೇಸರಿ ಬಿಳಿ ಹಸಿರು ಮೂರು
ಬಣ್ಣ ನಡುವೆ ಚಕ್ರವು
ಸತ್ಯ ಶಾಂತಿ ತ್ಯಾಗ ಮೂರ್ತಿ
ಗಾಂಧಿ ಹಿಡಿದ ಚರಕವು
ಇಂಥ ಧ್ವಜವು ನಮ್ಮ ಧ್ವಜವು
ನೋಡು ಹಾರುತಿರುವುದು
ಧ್ವಜದ ಭಕ್ತಿ ನಮ್ಮ ಶಕ್ತಿ
ನಾಡಗುಡಿಯು ಮೆರೆವುದು

**– ಕಯ್ಯಾರ ಕಿಞ್ಞಣ್ಣ ರೈ**

ಪದ್ಯವನ್ನು ಓದಿದಿರಲ್ಲವೇ? ಈ ಪದ್ಯದ ಆಶಯವನ್ನು ಬರೆಯಿರಿ.

3. ನೀವು ದೂರದ ಊರುಗಳಿಗೆ ಪ್ರಯಾಣ ಮಾಡಿದ್ದೀರಲ್ಲವೇ? ನಿಮ್ಮ ಪ್ರಯಾಣದ ಅನುಭವವನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

4. ಜಾಹೀರಾತು ತಯಾರಿಸಿರಿ.

‘ಸಿಹಿ ಸಿಹಿ’ ಎಂಬ ಹೆಸರಿನಲ್ಲಿ ‘ವಿಜಯ ಕಂಪೆನಿ’ಯು ಹೋಳಿಗೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ವ್ಯಾಪಾರವನ್ನು ಹೆಚ್ಚಿಸುವ ಉದ್ದೇಶದಿಂದ ಅವರು ಒಂದು ಜಾಹೀರಾತು ತಯಾರಿಸಿದ್ದಾರೆ. ಆ ಜಾಹೀರಾತು ಹೇಗಿದ್ದಿರಬಹುದು? ಊಹಿಸಿ ನೀವು ಜಾಹೀರಾತು ತಯಾರಿಸಿರಿ.

5. ನಿಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಯನ್ನಾಚರಿಸಿದ್ದೀರಲ್ಲವೇ? ಅಂದಿನ ನಿಮ್ಮ ದಿನಚರಿಯನ್ನು ಬರೆಯಿರಿ.

* * *